
ಕೊಡುಗೆ : ರು. ಮಾ. ರಾಮುತಂಪ್ರು.

ಪಂಚಮ

ಸಂಪುಟ 10
ಸಂಚಿಕೆ 1-14
ಜುಲೈ 1986
ಬೆಲೆ 1 ರೂ.



ಮರಹುಟ್ಟಿ ಮರಬಿತ್ತೊ

ಸವರ್ಣೀಯ ಮನಸ್ಸು 'ಬಾಬೂಜಿ' ಎಂದು ತುಂಬು ಮನಸ್ಸಿನಿಂದ ಕರೆಯಲೂ ಮುಜುಗರಪಡುತ್ತಿದ್ದ,-ಆ ದೊಡ್ಡ ಕಪ್ಪು ಕಾಯವನ್ನು ಅವಹೇಳನದ ಕಣ್ಣಿಂದ ಮಾತ್ರವೇ ಕಾಣತೊಡಗಿದ್ದ; ದಲಿತರ ಪಾಲಿಗೆ ಗಗನಕುಸುಮವಾಗಿರುವ ಸ್ವಾತಂತ್ರ್ಯ ಅನ್ನೋ ಫಲದ ತೋಟ್ವಾಗಿದ್ದ ಜಗಜೀವನ ರಾಂ ಇನ್ನಿಲ್ಲ.

ಆ ದೇಹವು ದೆಹಲಿಯ ರಾಜಘಾಟ್‌ನಲ್ಲಿ ಸಮಾಧಿಯಾಗಬೇಕೆಂದು ಸಾವಿರಾರು ಯುವಕರು ಇಚ್ಛಿಸಿದರೆ, ಕುಟುಂಬದವರ ಇಚ್ಛೆಯಂತೆ ರಾಂ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು. ಈ ಹಿನ್ನೆಲೆಯಲ್ಲಿ ದೇಶವು ಅಗಲಿದ ನಾಯಕನಿಗೆ ಸಂತಾಪ, ಗೌರವಗಳನ್ನು ಸೂಚಿಸಿತು. ರಾಂ ಸತತವಾಗಿ ನಾಲ್ಕು ದಶಕಗಳು ರಾಜಕೀಯ ಜೀವನದಲ್ಲಿದ್ದರು. ಇಂಡಿಯಾದ ರಾಜಕೀಯವು ಅವರ ಕೈಲಿ ಬಡವರ ಕಣ್ಣೊರೆಸುವ ಕೆಲಸ ಮಾಡಿಸಿತೋ, ಇಲ್ಲವೋ; ಆದರೆ, ನೆಹರೂ ಮನೆತನದ ರಾಜಕೀಯ ಅಧಿಕಾರ ವ್ಯಾಪ್ತಿಯಲ್ಲಿ ಜಗಜೀವನರಾಂರವರ ಇರುವಿಕೆಯು ಅಸ್ಪೃಶ್ಯರಿಗೆ, ಹಿಂದುಳಿದ ವರ್ಗದವರಿಗೆ ಹೀಗಾಗಿ ಇಡೀ ದೇಶಕ್ಕೆ ಅಭಯವಾಗಿತ್ತು. ಆದ್ದರಿಂದಲೇ ಇರಬಹುದು ಮಾಂಸದ ಮುದ್ದೆಯಾದ ರಾಂ ದೇಹವು, ಮಾಂಸದ ಮುದ್ದೆಯಾಗಿ ದೆಹಲಿಯಲ್ಲಿದ್ದರೆ, ಮನಸ್ಸು ಪಾದರಸದಂತೆ ಇಂಡಿಯಾ ಎಂಬ ಮನುಷ್ಯನ ನರನಾಡಿಗಳಲ್ಲಿ ಸಂಚರಿಸಿತು. ಈಗ ರಾಜೀವ್ ಗಾಂಧಿಯ ರಾಜಕೀಯವು ದೇಶವನ್ನು ಇಪ್ಪತ್ತೊಂದನೇ ಶತಮಾನಕ್ಕೆ ನಡೆಸುತ್ತಿರುವಾಗ್ಗ ದೇಶಕ್ಕೆ ಅಭಯವಿಲ್ಲವಾಗಿದೆ.

ಜಾತಿ, ಅವಮಾನ, ಹಸಿವು, ಅನ್ಯಾಯ, ಭ್ರಷ್ಟಾಚಾರ ಇಂತಹ ಸಕಲವೂ ತುಂಬಿ ತುಳುಕಾಡಿ ಭಾರತಮಾತೆಯ ಮನಸ್ಸಿಗೆ ಹುಚ್ಚು ಹಿಡಿದಂತಾಗಿದೆ. ಈ ಹುಚ್ಚಿಯ ಮನಸ್ಸನ್ನು ತಿದ್ದಲು ಯೋಗ್ಯತೆ ಇಲ್ಲದ ಇಂಡಿಯಾದ ರಾಜಕೀಯ, ಮನುಷ್ಯನು ಜಗಜೀವನರಾಂರಂಥ ಅನುಭಾವೀ ರಾಜಕಾರಣಿಯನ್ನು ಮೊನ್ನೆ ತಾನೇ ಕಳೆದುಕೊಂಡು ಅಂಗವಿಕಲನಾಗಿ ಬಿಟ್ಟನು.

ರಾಂ ಸಾವು, ಸಾವಾಗದೆ ವಿವಾದಕ್ಕೂ ದಾರಿಯಾಗಿದೆ. ಅದೇನೆಂದರೆ: ಡಾ|| ಬಿ. ಆರ್. ಅಂಬೇಡ್ಕರ್ ಹಿಂದೂ ಧರ್ಮವನ್ನು ಬಿಟ್ಟಾಗ ಜಗಜೀವನ ರಾಂ ವಿರೋಧಿಸಿದರೆಂಬ ಭಿನ್ನಾಭಿಪ್ರಾಯವು ಪತ್ರಿಕೆಗಳು, ಸಮುದಾಯಗಳ ಮೂಲಕ ಹರಡುತ್ತಿದೆ. ಆದರೆ, ರಾಂ ರವರು ಕಾಶಿಯ ಸಂಪೂರ್ಣಾನಂದ ಸ್ವಾಮಿ ವಿಗ್ರಹ ಅನಾವರಣ ಮಾಡಿದಾಗ ಗಂಗಾ ನದಿಯ ನೀರಿನಿಂದ ಪವಿತ್ರಗೊಳಿಸಿ ರಾಂರವರಿಗೆ ಅವಮಾನಿಸಿದ ಪುರೋಹಿತಶಾಹಿಯು ಅವರಿಗೆ ತಿಳಿಯದ ಸಂಗತಿಯಲ್ಲ. ಈ ಅವಮಾನವೇ ರಾಂ-ಅಂಬೇಡ್ಕರ್‌ರವರು ಅಪ್ಪಿಕೊಂಡು, ಮುವ್ವಾಡಿ ನಿಟ್ಟುಸಿರು ಬಿಟ್ಟಿರುತ್ತಾರೆ. ಈ ನಿಟ್ಟುಸಿರಿನ ತಾಪ ರಾಂ-ಅಂಬೇಡ್ಕರ್‌ರನ್ನು ದೂರ ಮಾಡುವ, ಗಂಡನನ್ನು ಹೆಂಡತಿಯಿಂದ, ಮಕ್ಕಳನ್ನು ತಂದೆ-ತಾಯಿಯಿಂದ, ದೇಶವನ್ನು ಜನತೆಯಿಂದ ದೂರ ದೂರ ಮಾಡುವ ಪುರೋಹಿತಶಾಯಿಗೆ ತಟ್ಟಲಿ.

ಈಗ ರಾಂ ಇಲ್ಲ. ಅವರಲ್ಲಿ ಸಮೃದ್ಧ ಮಳೆ ಬಿದ್ದು ಬೆಳೆದ ಹಸಿರಿತ್ತು. ಮಳೆ ಇಲ್ಲದೇ ತತ್ತರಿಸಿದ ಬರವಿತ್ತು. ಮರ ಹುಟ್ಟಿ, ಮರ ಬಿತ್ತು ಅಲ್ಲವೇ?

ಒಂದು ಮನವಿ

ಪ್ರಿಯರೇ,

ಹಲವಾರು ಅನಿವಾರ್ಯ ಕಾರಣಗಳಿಂದಾಗಿ ನಿಂತು ಹೋಗಿದ್ದ "ಪಂಚಮ" ಇದೀಗ ಮತ್ತೆ ಆರಂಭಗೊಂಡಿದೆ. ಬೆಳಕ ಹಂಬಲಿಸಿ ಸಾಗುತ್ತಿರುವ ಕತ್ತಲ ಪಯಣಿಗರ ಕೈದೀಪವಾಗಿ "ಪಂಚಮ" ಇನ್ನು ನಿರಂತರವಾಗಿ ನಿಮ್ಮ ಕೈಸೇರಲಿದೆ. ಇನ್ನು ಮುಂದೆ ಯಾವ ಕಾರಣಗಳಿಗೂ ಬಗ್ಗದೆ "ಪಂಚಮ"ವನ್ನು ಹೊರತರಲು ವ್ಯವಸ್ಥೆ ಮಾಡಲಾಗಿದೆ.

ಆದ್ದರಿಂದ ಎಲ್ಲ ಓದುಗರು ಹಿತೈಷಿಗಳು "ಪಂಚಮ"ವನ್ನು ಎಂದಿನಂತೆ ಬರಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ.

"ಪಂಚಮ"ದ ಹೆಸರಿನಲ್ಲಿ ಕೆಲವರು ಚಂದಾ-ವಂತಿಗೆ ಇತ್ಯಾದಿ ಸಂಗ್ರಹಿಸುತ್ತಿರುವ ದೂರು ವ್ಯವಸ್ಥಾಪಕ ಮಂಡಲಿಯ ಗಮನಕ್ಕೆ ಬಂದಿದೆ. ಆದ್ದರಿಂದ ಸಂಪಾದಕ/ಪ್ರಕಾಶಕರ ಅಧಿಕೃತ ಸಹಿ ಇರುವ ರಸೀತಿಯನ್ನು ನೀಡಿದರೆ ಮಾತ್ರ ಚಂದಾ/ವಂತಿಗೆ ನೀಡಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ.

ತಮ್ಮ ಸಲಹೆ ಸಹಕಾರಗಳನ್ನು ಸದಾ ನಿರೀಕ್ಷಿಸುತ್ತೇವೆ.

ವ್ಯವಸ್ಥಾಪಕ ಮಂಡಲಿ

ಹೊಲೆಯನಾದ ಬ್ರಾಹ್ಮಣ

ಅನುಭವದ ಗಣಿಯಿಂದ

ಪೂರ್ವ ಆಫ್ರಿಕಾದ ಪುಟ್ಟ ರಾಷ್ಟ್ರವಾದ ಸೊಮಾಲಿಯಾದಲ್ಲಿ ವೈದ್ಯನಾಗಿ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿತ್ತು. ಮುಂಬೈಯಿಂದ ಹೊರಟ ನಮ್ಮ ವಿಮಾನ ಮೂರು ಗಂಟೆಗಳ ನಂತರ ಅರಬ್ ಸಂಯುಕ್ತ ಸಂಸ್ಥಾನದ ಪ್ರಮುಖ ಪ್ರದೇಶವಾದ ಅಬುದಾಬಿಯಲ್ಲಿ ಇಳಿಯಿತು. ಅಲ್ಲಿಂದ ಮುಂದೆ ಬೇರೊಂದು ವಿಮಾನ ಹಿಡಿಯಬೇಕಿತ್ತು. ಆ ವಿಮಾನ ಬರಲು ಇನ್ನೂ 6 ಗಂಟೆಗಳ ಕಾಲವಿತ್ತು.

ಹೀಗಾಗಿ ಶ್ರೀಮಂತ ಪೆಟ್ರೋಡಾಲರ್‌ಗಳಿಂದ ಕಟ್ಟಲಾದ ಆ ಅತ್ಯಾಧುನಿಕ ವಿಮಾನ ನಿಲ್ದಾಣ ವೀಕ್ಷಿಸುತ್ತಾ ನಡೆಯುತ್ತಿದ್ದೆ. ಲೌಂಜಿನ ಇಂಜನಿಯರಿಂಗ್ ಕೌಶಲ್ಯಕ್ಕೆ ಬೆರಗಾಗಿ, ಡ್ಯೂಟಿ ಫ್ರೀ ಅಂಗಡಿಗಳಲ್ಲಿನ ಥರಾವರಿ ಎಲೆಕ್ಟ್ರಾನಿಕ್ಸ್ ವಸ್ತುಗಳ ಮೋಡಿಗೆ ಬಾಯ್ಬಿಡುತ್ತಾ ಥಳಥಳನೆ ಹೊಳೆಯುವ, ಅತ್ಯಂತ ಶುಭ್ರವಾದ ಶೌಚಗೃಹದ ಒಳ ಹೊಕ್ಕೆ.

ಸಮವಸ್ತ್ರ ಧರಿಸಿದ್ದ ಇಬ್ಬರು ಹುಡುಗರು ಕನ್ನಡಿ ಗೋಡೆಗೆ ಹಾಸಿರುವ ದುಬಾರಿ ಮೊಸಾಯಿಕ್ ಕಲ್ಲುಗಳನ್ನು ಉಜ್ಜಿ ಉಜ್ಜಿ, ತೀಡಿ ತೀಡಿ ಹಸನು ಮಾಡುವುದರಲ್ಲಿ ಮಗ್ನರಾಗಿದ್ದರು. ತಮ್ಮಲ್ಲೇ ಮೆಲು ದನಿಯಲ್ಲಿ ಅದೂ ಕನ್ನಡದಲ್ಲಿ ಮಾತಾಡುತ್ತಿದ್ದುದು ಕೇಳಿಸಿತು. ಮುಖಕ್ಕೆ ಹಚ್ಚಿದ್ದ ಲಿಕ್ವಿಡ್ ಸೋಪನ್ನು ಬೇಗ ಬೇಗ ತೊಳೆದುಕೊಂಡು ಧ್ವನಿ ಬಂದತ್ತ ಕುತೂಹಲದಿಂದ ನೋಡಿದೆ. ಅದೇ ಹುಡುಗರು, ನಿಸ್ಸಂದೇಹವಾಗಿ ಅವರು ಕರ್ನಾಟಕದವರಾಗಿದ್ದರು.

ವಿಚಾರಿಸಲಾಗಿ ದಾವಣಗೆರೆಯಿಂದ ಒಬ್ಬ, ಮಂಗಳೂರಿನಿಂದ ಇನ್ನೊಬ್ಬ ವಿದೇಶೀ ಕೆಲಸದ ಮೋಹಕ್ಕೆ ಬಿದ್ದು ಅಬುದಾಬಿಯ ಶೌಚಗೃಹ ಸೇರುವುದರಲ್ಲಿ ಯಶಸ್ವಿಯಾಗಿದ್ದರು! ಅವರನ್ನು ಕನ್ನಡದಲ್ಲಿ ಮಾತಾಡಿಸಿದಾಗ ನಾಚಿಕೆ, ಅವಮಾನಗಳಿಂದ ಮಾತೇ ಹೊರಡದವರಂತೆ ನಿಂತಿದ್ದರು. ಸ್ವಲ್ಪ ಧೈರ್ಯ ತುಂಬಿದ ಮೇಲೆ ತಮ್ಮ ದಾರುಣ ಕತೆ ಬಿಚ್ಚಿದರು.

ಮುಂಬೈ ಏಜೆಂಟನೊಬ್ಬನ ವಿಷ ವರ್ತುಲದಲ್ಲಿ ಸಿಕ್ಕಿ ಬಿದ್ದ ಇವರು ಪ್ರತಿ ತಿಂಗಳೂ ತಮ್ಮ ಸಂಬಳದಲ್ಲಿ ಏಜೆಂಟನಿಗೆ ಒಂದು ಸಾವಿರ ರೂ. ಕೊಡುತ್ತಾ ಇನ್ನೊಂದು ಸಾವಿರಕ್ಕೆ ಊಟ, ವಸತಿ ಪಡೆಯುತ್ತಾ ಇನ್ನುಳಿದ 500 ರೂಪಾಯಿಗೆ ದುಡಿಯುತ್ತಾ ನರಳುತ್ತಿದ್ದರು. ಆ 500 ರೂ. ಕೈ ಸೇರುವ ಗ್ಯಾರಂಟಿ ಇಲ್ಲದೆ ಹಿಂತಿರುಗಲು ಪಾಸ್‌ಪೋರ್ಟ್ ದೊರೆಯದೆ ಬದುಕಲು ಹಣವಿಲ್ಲದೆ ದಾರುಣ ಬದುಕು ಬದುಕುತ್ತಿದ್ದರು.

ಇಂಥ ದಾರುಣ ಬದುಕಿನಲ್ಲೂ ಒಂದು ಅಂಶ ಮಾತ್ರ ಅವರಲ್ಲಿ ಜಾಗೃತವಾಗಿತ್ತು. ಮಂಗಳೂರಿನ ಹುಡುಗ ಅಳುತ್ತಾ "ನೋಡಿ ಸಾರ್ ನಾನು ಹುಟ್ಟಿನಿಂದ ಬ್ರಾಹ್ಮಣ, ಆದರೆ ಅದ್ಯಾವ ಜನ್ಮದ ಪಾಪವೋ ಈಗ ಹೊಲೆಯನಾಗಿ ಬದುಕಬೇಕಾಗಿ ಬಂದಿದೆ" ಎಂದು ಕಣ್ಣೀರು ಒರೆಸಿಕೊಂಡ. ನನಗೆ ನಗಬೇಕೋ ಅಳಬೇಕೋ ತಿಳಿಯಲಿಲ್ಲ.

● ಡಾ|| ಜಗನ್ನಾಥ್

ಪಂಚಮ

ವ್ಯವಸ್ಥಾಪಕ ಮಂಡಳಿ

"ಪಂಚಮ" ಪತ್ರಿಕೆಯ ವ್ಯವಸ್ಥಾಪಕ ಮಂಡಳಿಯನ್ನು ಪುನರ್ ರಚಿಸಲಾಗಿದ್ದು, ಮಂಡಲಿಯಲ್ಲಿ ಈ ಕೆಳಕಂಡವರಿದ್ದಾರೆ.

ಸಂಪಾದಕ:
ಪ್ರಕಾಶಕ : ರಂಗಸ್ವಾಮಿ ಬೆಲ್ಲದಮಡು
ಮುದ್ರಕ :

ಸಹ ಸಂಪಾದಕ :
ಕೆ. ರಾಮಯ್ಯ

ಸದಸ್ಯರು :
ರಾಮದೇವ ರಾಕೆ
ಎಚ್. ಗೋವಿಂದಯ್ಯ
ಶಿವಾಜಿ ಗಣೇಶನ್
ಇಂದೂಧರ ಹೊನ್ನಾಪುರ
ಬಿ. ಕೃಷ್ಣಪ್ಪ
ದೇವನೂರ ಮಹಾದೇವ
ವಿ. ನಾಗರಾಜ್
ಕೆ. ಬಿ. ಸಿದ್ಧಯ್ಯ
ಎಂ. ಸಿ. ನರಸಿಂಹಮೂರ್ತಿ

PANCHAMA

(Form IV See Rule 8)

1	Place of publication :	Bangalore, Karnataka State
2	Periodicity of publication :	Fortnightly
3	Printer's Name :	Rangaswamy Belladamadu
	Whether the citizen of India:	Yes
4	Editor's Name :	Rangaswamy Belladamadu.
	Whether the citizen of India:	Yes
5	Name & address of individuals who own the News Paper and partners or Share holder, holding more than one percent of the capital.	1 H. Govindaiah 2 Indudhara Honnapura 3 Shivaji Ganeshan 4 Shivamalla Devanoor 5 Ramadeva Rake

48, 3rd Main, 5th Cross, Sampangiramanagar,
Bangalore-560 027.

Rangaswamy Belladamadu, hereby declare that the particulars above are true to the best of my knowledge and belief.

Place : Bangalore
Date : 26-6-86

(Sd) Rangaswamy Belladamadu
Signature of publisher

ಜನತಾ ಪಕ್ಷದ ಕುತಂತ್ರ:

ರಾಜ್ಯದಾದ್ಯಂತ ದಲಿತ ವಿದ್ಯಾರ್ಥಿಗಳ ಮುಷ್ಕರ

ಜುಲೈ 30ರಂದು ಬೆಂಗಳೂರಿನಲ್ಲಿ 300ಕ್ಕೂ ಹೆಚ್ಚು ಬಂಧನ. ಅದೇ ದಿನ ರಾಜ್ಯದ ನಾನಾ ಜಿಲ್ಲಾ ಕೇಂದ್ರಗಳಲ್ಲಿ ಬೀದಿಗಿಳಿದ ಸಾವಿರಾರು ವಿದ್ಯಾರ್ಥಿಗಳಿಂದ ಪ್ರತಿಭಟನೆ, ಮುಷ್ಕರ.

ದಲಿತ ಸಂಘರ್ಷ ಸಮಿತಿ ಮತ್ತು ದಲಿತ ವಿದ್ಯಾರ್ಥಿ ಒಕ್ಕೂಟಗಳು ಬೀದಿಗಿಳಿದು ಹೋರಾಡಬೇಕಾಯಿತು. ಮೌಲ್ಯಾಧಾರಿತ ಅಮಲಿನ ಜನತಾ ಪಕ್ಷದ ಕಣ್ಣು ತೆರೆಸಬೇಕಾಯಿತು. ಇದೆಲ್ಲ ಯಾಕಾಗಿ? ಎಂದು ಯಾವುದೇ ಮಾನವಂತ ಮನುಷ್ಯ ಯೋಚಿಸಿದರೆ ಸಾಕು: ದಲಿತರ ಮಕ್ಕಳ ವಿದ್ಯೆಯ ಬಾಗಿಲನ್ನೂ ಮುಚ್ಚಬಯಸಿದ ಜನತಾ ಪಕ್ಷದ ಈ ಕೃತ್ಯಕ್ಕೆ ಛೀಮಾರಿ ಹಾಕದಿರಲಾರ.

ಮೊನ್ನೆಯ ತನಕ ಕ್ಯಾರಿ ಓವರ್ ಸೌಲಭ್ಯ ಹೊಂದುವ ದಲಿತ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ನಲ್ಲಿ ಸೀಟು ಕೊಡಲಾಗುತ್ತಿತ್ತು. ಹಾಸ್ಟೆಲ್ ಸೀಟು ಎಂದರೆ ಎಲ್ಲ ಸೌಲಭ್ಯಗಳಿರುವುದಿಲ್ಲ. ರಾಜ್ಯದ ಐದಾರು ಜಿಲ್ಲಾ ಕೇಂದ್ರಗಳನ್ನು ಬಿಟ್ಟರೆ ಎಲ್ಲಿಡೆ ಹಾಸ್ಟೆಲ್ ಕಟ್ಟಡಗಳೇ ಇಲ್ಲ. ಹಂದಿಗೂಡಿನಂತಹ ಜಾಗಗಳಲ್ಲಿ ಅಡಿಗೆ ಬೇಯಿಸಿ ಊಟ ಕೊಡುವ ಮೆಸ್‌ಗಳು ಅಷ್ಟೆ. ಕೆಸರಲ್ಲಿ, ಕೊಳಚೆಯಲ್ಲಿ ನಿಂತೇ ಊಟ ತಿಂದು ಹೋಗಬೇಕು. ವಸತಿ ತಾವೇ ಹುಡುಕಿಕೊಂಡಿರಬೇಕು. ಇದಕ್ಕೆಲ್ಲ ಹೊಂದಿಕೊಂಡೇ ಪ್ರಥಮ ಪದವಿ ತರಗತಿ ಮತ್ತು ಎರಡನೇ ಪದವಿ ತರಗತಿಗಳಲ್ಲಿ ನಪಾಸಾದ ವಿದ್ಯಾರ್ಥಿಗಳು ಕ್ರಮೇಣ ಪಾಸು ಮಾಡಿಕೊಳ್ಳುತ್ತಿದ್ದರು. ಗ್ರಾಮೀಣ ಪ್ರದೇಶಗಳ ಹಿನ್ನೆಲೆಯಿಂದ ಬಂದ ದಲಿತ ವಿದ್ಯಾರ್ಥಿಗಳು ಮೊದ ಮೊದಲು ಈ ಶಿಕ್ಷಣ ಪದ್ಧತಿಗೆ ಹೊಂದಿಕೊಳ್ಳಲು ಹೆಣಗಬೇಕಾಗುತ್ತದೆ. ಈ ಮೆಸ್‌ಗಳು ಮತ್ತು ಹಾಸ್ಟೆಲ್‌ಗಳು ವರ್ಷದಲ್ಲಿ ಪ್ರಾರಂಭವಾಗುವುದೇ ಆಗಸ್ಟ್ ತಿಂಗಳ ಮೊದಲ ವಾರದ ನಂತರ. ನವೆಂಬರ್‌ನಲ್ಲಿ ಒಂದು ತಿಂಗಳು ಮಧ್ಯಂತರ ರಜ. ಈ ವ್ಯವಸ್ಥೆಗೆ ಹೊಂದಿಕೊಂಡು ಅಭ್ಯಾಸ ರೂಢಿಸಿಕೊಳ್ಳುವ ಹೊತ್ತಿಗೆ ಅಂದರೆ ಮಾರ್ಚ್ ಕೊನೆಗೆ ಈ ಊಟದ ಕೇಂದ್ರಗಳು ಅನೇಕ ಕಡೆ ಮುಚ್ಚಿಬಿಡುತ್ತವೆ. ಪರೀಕ್ಷೆ ನಡೆಯುವ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಊಟ-ವಸತಿಗಾಗಿ ಇವರ ಪಾಡು ಹೇಳತೀರದು. ಇವೆಲ್ಲವುಗಳ ಮಧ್ಯೆ ಇತರ ವಿದ್ಯಾರ್ಥಿಗಳ ಜೊತೆ ಸ್ಪರ್ಧೆಗೆ ಓದಬೇಕು...

ಆದ್ದರಿಂದಲೇ ಅನೇಕರು ನಪಾಸಾಗುತ್ತಿದ್ದರು. ಸರ್ಕಾರದ ಈ ಕ್ಯಾರಿ ಓವರ್ ಪದ್ಧತಿ ಮತ್ತು ಹಾಸ್ಟೆಲು ಸೌಲಭ್ಯ ಇಂಥ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿತ್ತು.

ಆದರೆ ಮೊದಲಿನಿಂದಲೂ ದಲಿತರ ಹಿತಾಸಕ್ತಿಗಳನ್ನು ಬಗ್ಗು ಬಡಿಯಲು ನೂರಾರು ತಂತ್ರ ಹುಡುಕುವ ಪುರೋಹಿತಶಾಹಿ ಅಧಿಕಾರಶಾಹಿಗೆ ಈ ಸೌಲಭ್ಯದ ಮೇಲೆ ಕಣ್ಣಿತ್ತು. ಹಿಂದೊಮ್ಮೆ ಗುಂಡೂರಾಯರ ಆಳ್ವಿಕೆಯಲ್ಲಿ ಈ ಸೌಲಭ್ಯ ಕಿತ್ತುಹಾಕುವ ಯತ್ನ ನಡೆಯಿತು. ಅನೇಕ ದಲಿತ ನಾಯಕರ ಅಸಮ್ಮತಿಯಿಂದ ಆ ಪ್ರಯತ್ನ ನಿಂತುಹೋಯಿತು.

ಇದೀಗ ಪುರೋಹಿತಶಾಹಿ ಅಧಿಕಾರಶಾಹಿಯ ದಾಸಾನುದಾಸನಂತೆ ವರ್ತಿಸುತ್ತಿರುವ ಜನತಾ ಪಕ್ಷ ಇಂಥ ನೀಚತನಕ್ಕೆ ಕೈಹಾಕಿತು. ತಾನೊಬ್ಬ ಪಾಳೆಯಗಾರ ಎಂಬುದನ್ನು ಹೆಜ್ಜೆ ಹೆಜ್ಜೆಗೆ ತೋರುತ್ತಾ ಬಂದ ಹಿಂದುಳಿದ ಜಾತಿಗೆ ಸೇರಿದ್ದರೂ, ತಾನೊಬ್ಬ ಮೇಲ್ಜಾತಿಯ ವಕ್ತಾರ ಎಂದೂ ನಂಬಿರುವ ಹುಂಬ ಮಾಜಿ ಸಮಾಜ ಕಲ್ಯಾಣ ಸಚಿವ ವಿ. ಎಲ್. ಪಾಟೀಲ್ ಮಹಾಶಯ ಪುರೋಹಿತಶಾಹಿಯ ಕೈಗೊಂಬೆಯಾದ. ಪರಿಣಾಮ:

ಹಾಸ್ಟೆಲು ಸೌಲಭ್ಯಕ್ಕೆ ಸಂಬಂಧಿಸಿದ ಕಾಯ್ದೆ ತಿದ್ದುಪಡಿಗೆ ಒಳಗಾಯಿತು. ಅಷ್ಟೇ ಅಲ್ಲ, ಮಿಂಚಿನ ವೇಗದಲ್ಲಿ ಈ ವರ್ಷ ಜಾರಿಗೂ ಬಂತು.

ರಾಜ್ಯದಾದ್ಯಂತ ಸುಮಾರು 35,000 ದಲಿತ ವಿದ್ಯಾರ್ಥಿಗಳು ಸರ್ಕಾರದ ಈ ಕುತಂತ್ರಕ್ಕೆ ಬಲಿಯಾಗಿ ಬೀದಿ ಪಾಲಾಗುವುದರಲ್ಲಿದ್ದರು.

ಭೂ ಒತ್ತುವರಿ ಶಾಸನ ತಂದು ದಲಿತರ ಭೂಮಿ ಕಬಳಿಸಿದ್ದ ಜನತಾ ಪಕ್ಷ ದಲಿತರ ಜೋಪಡಿಗಳಲ್ಲಿನ ಕತ್ತಲನ್ನು ಮತ್ತಷ್ಟು ಹೆಚ್ಚಿಸಿತ್ತು. ಅದೂ ಸಾಲದೆಂಬಂತೆ ಈಗ ದಲಿತರ ಬಾಳಿಗೆ ಏಕೈಕ ದಾರಿಯಾಗಿದ್ದ ಅವರ ಮಕ್ಕಳ ವಿದ್ಯೆಯ ಬಾಗಿಲನ್ನೂ ಮುಚ್ಚುವುದರಲ್ಲಿತ್ತು.

ಆಳುವ ಜನತಾ ಪಕ್ಷದ, ವಿರೋಧಿ ಕಾಂಗ್ರೆಸ್ ಪಕ್ಷದ ದಲಿತ ಶಾಸಕರು, ಸಚಿವರು. ಇದು ಯಾಕೆ? ಇದು ಏನು? ಅಂತ ಕಣ್ಣು ಬಿಡುವುದರೊಳಗಾಗಿ ದ.ಸಂ.ಸ. ರಾಜ್ಯದಾದ್ಯಂತ ಮುಷ್ಕರ ಹೂಡಿಯಾಗಿತ್ತು. ಸಾವಿರಾರು ದಲಿತ ವಿದ್ಯಾರ್ಥಿಗಳು ಬೀದಿಗಿಳಿದಾಗಿತ್ತು.

ಪ್ರತಿಭಟನೆ, ಮುಷ್ಕರ ಉಗ್ರ ಸ್ವರೂಪ ತಾಳುವ ಮುನ್ನವೇ ಜನತಾ ಪಕ್ಷದ ಮೌಲ್ಯಾಧಾರಿತ ಮುಖಕ್ಕೆ ನಾಚಿಕೆಯಾಗಿ ತಿದ್ದುಪಡಿ ಹಿಂತೆಗೆದುಕೊಳ್ಳುವುದಾಗಿ ಹೇಳಿದೆ. ಮುಷ್ಕರದ ಮರುದಿನವೇ ಸಮಾಜಕಲ್ಯಾಣ ಸಚಿವ ಬಸವಣ್ಣಪ್ಪ ಆ ಕಾನೂನು ಜಾರಿಯನ್ನು ಒಂದು ವರ್ಷ ಮುಂದೂಡುವುದಾಗಿ ಹೇಳಿದ್ದಾರೆ. ಇದು ಸರ್ಕಾರಿ ಆಜ್ಞೆ ರೂಪ ತಾಳಿ ಬರುವ ವೇಳೆಗೆ ಕಾಲೇಜು ಆಡಳಿತ ವರ್ಗ ಹಾಸ್ಟೆಲ್ ಸ್ಕಾಲರ್‌ಗಳನ್ನು ಡೇ ಸ್ಕಾಲರ್‌ಗಳಾಗಿ ಪರಿವರ್ತಿಸತೊಡಗಿದ್ದಾರೆ.

ಸುಮಾರು ವರ್ಷಗಳಿಂದ ಜಿಲ್ಲೆಗೊಂದು ಶಾಶ್ವತ ಹಾಸ್ಟೆಲು ಕಟ್ಟಡ, ಎಲ್ಲಾ ಖಾಸಗಿ ವಿದ್ಯಾರ್ಥಿ ನಿಲಯಗಳ ಸರ್ಕಾರೀಕರಣ, ಹಾಸ್ಟೆಲುಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ನಿರ್ಮೂಲನೆಗೆ ಒತ್ತಾಯಿಸುತ್ತಲೇ ಇದ್ದಾರೆ. ಹಾಸ್ಟೆಲ್‌ಗಳೆಂಬ ಊಟದ ಕೇಂದ್ರಗಳ ಕಟ್ಟಡಗಳ ಬಾಡಿಗೆಗಾಗಿ ಸರ್ಕಾರ ಪ್ರತೀ ವರ್ಷ ಲಕ್ಷಾಂತರ ರೂಪಾಯಿಗಳನ್ನು ಬಾಡಿಗೆ ರೂಪದಲ್ಲಿ ವ್ಯಥಾ ಪೋಲು ಮಾಡುತ್ತಿದೆ. ಇದೇ ಹಣವನ್ನು ಪ್ರತೀ ವರ್ಷ ಎರಡೆರಡು ಜಿಲ್ಲೆಗಳಲ್ಲಿ ಹಾಸ್ಟೆಲ್ ಕಟ್ಟಡ ಕಟ್ಟಿಸಿದ್ದಿದ್ದರೆ ಈ ಸಮಸ್ಯೆಗೆ ಶಾಶ್ವತ ಪರಿಹಾರ ಸಿಕ್ಕಿರುತ್ತಿತ್ತು; ಸರ್ಕಾರದ ಹಣ ಉಳಿದಿರುತ್ತಿತ್ತು.

ವರ್ಷ ವರ್ಷ ದಲಿತರ ಕಲ್ಯಾಣಕ್ಕೆ ಮೀಸಲಾದ ಕೇಂದ್ರ ಸರ್ಕಾರದ ಕೋಟ್ಯಂತರ ರೂಪಾಯಿ ಹಣ ವಿನಿಯೋಗಿಸಲ್ಪಡದೆ ವಾಪಸ್ಸಾಗುತ್ತಿದೆ. ಕಳೆದ ವರ್ಷ 12 ಕೋಟಿಗೂ ಹೆಚ್ಚು ಹಣ ವಾಪಸ್ಸಾಗಿದೆ. ಈ ಜನತಾ ಪಕ್ಷದ ಮೌಲ್ಯಾಧಾರಿತ ಸರ್ಕಾರಕ್ಕೆ ಏನಾಗಿದೆ? ಕನಿಷ್ಠ ಕೋಳಿ–ತಾಳಿ-ಸೀರೆಯ ನಕಲಿ ನಾಟಕ ನಿಲ್ಲಿಸಿ ದಲಿತರ ಮಕ್ಕಳಿಗೆ ಸಮಗ್ರ ವಿಕಾಸಕ್ಕಾಗಿ ಒಂದೇ ಒಂದು ಸಮರ್ಥ ಯೋಜನೆ ರೂಪಿಸುವ ಯೋಗ್ಯತೆ ಇಲ್ಲವೇ ಎನ್ನುತ್ತಾ ದ.ಸಂ.ಸ. ಈ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಲಿದೆ. ●

ಸಂಘಟನೆ–ಹೋರಾಟ

ಜುಲೈ 20ರಂದು ಬೆಂಗಳೂರಿನ ಯಶವಂತಪುರ ದಲಿತ ಕಾಲನಿಯ ಸಮುದಾಯ ಭವನದಲ್ಲಿ ನಡೆದ ಸಭೆಯಲ್ಲಿ ನೂತನ ಸಂಚಾಲಕರ ಆಯ್ಕೆ ನಡೆಯಿತು. ಮುನಿಯಲ್ಲಪ್ಪ [ಜಿಲ್ಲಾ ಸಂಚಾಲಕ]. ಜಗಣಿ ಶಂಕರ್ [ಸಂಘಟನಾ ಸಂಚಾಲಕ] ಆರ್. ಮುನಿಯಪ್ಪ [ನಗರ ಸಂಚಾಲಕ] ಹಾಗೂ ಮುನಿರಾಜು [ಖಜಾಂಚಿ] ಆಯ್ಕೆಯಾದ ನೂತನ ಸಮಿತಿಯ ಸದಸ್ಯರು.

ಜುಲೈ 21ರಂದು ಮಂಜುನಾಥ ನಗರದ ಕೊಳೆಗೇರಿಗಳಿಂದ ಒಕ್ಕಲೆಬ್ಬಿಸಲಾದ ದಲಿತರ ಪರವಾಗಿ ಬೆಂಗಳೂರಿನ ತಾಲ್ಲೂಕು ಕಚೇರಿ ಎದುರು ಒಂದು ದಿನದ ಧರಣಿ ನಡೆಸಲಾಯಿತು.

ಬೆಂಗಳೂರು ದ.ಸಂ.ಸ. ಶಾಖೆ ಜುಲೈ 27ರಂದು ಆನೇಕಲ್‌ನಲ್ಲಿ ಒಂದು ದಿನದ ಕಾರ್ಯಕರ್ತರ ಶಿಬಿರ ನಡೆಸಿತು. ಸುಮಾರು 80ಜನ ಕಾರ್ಯಕರ್ತರು ಭಾಗವಹಿಸಿದ್ದ ಶಿಬಿರದಲ್ಲಿ ರಾಮದೇವರಾಕೆ, ಎಲ್. ಹನುಮಂತಯ್ಯ, ಶಂಕರ್ ಮಾವಳ್ಳಿ, ಆರ್. ಮುನಿಯಪ್ಪ ವಿಷಯಗಳನ್ನು ಮಂಡಿಸಿದರು.

ರಾಯಚೂರು ಜಿಲ್ಲೆಯ ಗಂಗಾವತಿ ಬಳಿಯ ಬಂಡಿ ಹರ್ಲಾಪುರದಲ್ಲಿ ದ.ಸಂ.ಸ. ಜಿಲ್ಲಾಶಾಖೆ ಮೂರು ದಿನಗಳ ಕಾರ್ಯಕರ್ತರ ತರಬೇತಿ ಶಿಬಿರ ನಡೆಸಿತು. ಅಲ್ಲಿ ಪ್ರಾರಂಭವಾಗಿರುವ ಮಹಮದ್ ನಗರ ಭೂ ಹೋರಾಟದ ಹಿನ್ನೆಲೆಯಲ್ಲಿ ಈ ಶಿಬಿರ ಏರ್ಪಾಡಾಗಿತ್ತು. ಸುಮಾರು 100 ಜನ ಕಾರ್ಯಕರ್ತರು ಭಾಗವಹಿಸಿದ್ದ ಈ ಶಿಬಿರದಲ್ಲಿ ಎನ್. ವೆಂಕಟೇಶ್, ಶಂಕರ ಲಾಳಾಪುರ, ಎಂ.ಡಿ. ಗಂಗಯ್ಯ, ಶಿವಾಜಿ ಗಣೇಶನ್, ಕೆ. ರಾಮಯ್ಯ ಮುಂತಾದವರು ವಿಷಯ ಮಂಡಿಸಿದರು.

ಬಿಹಾರ ಎಂಬ ಕಗ

"ಕನ್ಸಾರಾ" ಒಡಲಲ್ಲಿ ಜ್ವಾಲಾಮುಖಿ ತುಂಬಿಕೊಂಡ ಬಿಹಾರದ ಒಂದು ಪುಟ್ಟಹಳ್ಳಿ. ನಲವತ್ತೋ ನಲವತ್ತು ಕುಟುಂಬಗಳು. 16 ಕುಟುಂಬಗಳು ಕಹರ್ ಮತ್ತು 12 ಕುಟುಂಬಗಳು ಕನೂಸ್ ಎಂಬ ಹಿಂದುಳಿದ ಜಾತಿಗಳಿಗೆ ಸೇರಿದ ಭೂಹೀನರವು. ಇನ್ನುಳಿದವು ಮೇಲ್ಜಾತಿಯ ಬಲಿಷ್ಠ ಭೂಮಾಲಿಕ ಭೂಮಿಹಾರರವು:

ಜುಲೈ 8 ರ ಅಪರಾಹ್ನ: ಭೂಮಿಹಾರರ ಹೊಲಗದ್ದೆಗಳಲ್ಲಿ ನಿತ್ಯದ ದುಡಿಮೆ ಮುಗಿಸಿ ದಣಿದು ಬಂದಿದ್ದ ದೇಹಗಳು ನೆಲಕ್ಕೆ ಒರಗಿದ್ದವು. ಮಹಿಳೆಯರು ಸಣ್ಣ ಪುಟ್ಟ ಮನೆಗೆಲಸಗಳಲ್ಲಿ ತೊಡಗಿದ್ದರು. ಕಹರ್ ಕೇರಿಯ ಮೇಲೆ ಅರೆ ನಿದ್ರೆ,ಅರೆ ಎಚ್ಚರದ ಮಂಪರು ಕವಿಯ ತೊಡಗಿತ್ತು.

ದಿಢೀರನೆ ಈ ಮಂಪರು ಸೀಳಿಕೊಂಡು ಬಂದ ಭೀತಿಯ ಅಲೆಗಳು ಕಹರ್ ಕೇರಿಯನ್ನು ಮುತ್ತಿದವು. ಅವುಗಳ ಬೆನ್ನೇರಿ ಬಂದೂಕುಧಾರಿ ಕೊಲೆಗಡುಕರು ಕೂಡ.

ಕಹರರ ನಿದ್ದೆಗಣ್ಣಿಗೆ ಏನು? ಎತ್ತ? ಎಂಬುದು ಇಳಿಯುವ ಮುನ್ನವೇ ಬಂದೂಕುಗಳು ಮೊಳಗಿದವು.ಲಾಠಿ ಕತ್ತಿ,ಕೊಡಲಿಗಳು ಕ್ರಿಯೆಗಿಳಿದವು. 6 ಜನ ಅಸಹಾಯಕ, ಮಹಿಳೆಯರು, ಇಬ್ಬರು ಎಳೆಯ ಬಾಲಕರು, ಇಬ್ಬರು ವಯಸ್ಸಾದ ಗಂಡಸರು ಗುಂಡೇಟಿಗೆ ಬಲಿಯಾಗಿ ರಕ್ತದ ಮಡುವಿಗೆ ಉರುಳಿದರು.

ಕಾಲಲ್ಲಿ ಶಕ್ತಿ ಇದ್ದವರು ಹಾವು ಹೊಕ್ಕ ಬಿಲದಿಂದ ತಪ್ಪಿಸಿಕೊಂಡು ಓಡುವ ಇಲಿಗಳಂತೆ ದಿಕ್ಕಾಪಾಲಾಗಿ ಓಡಿ ತಲೆ ತಪ್ಪಿಸಿಕೊಂಡರು.

ಆ ನಂತರ ಕೊಲೆಗಡುಕರು ಕೊಲೆಯಾದವರ ಹೆಣಗಳನ್ನು ಸತ್ತ ನಾಯಿಗಳಂತೆ ದರ ದರ ಎಳೆದೊಯ್ದು ಊರ ಮುಂದಿನ ಕೆರೆಗೆ ಬಿಸಾಡಿ ಹೋದರು.

ಪ್ರಮೀಳಾ ಕಂಡದ್ದು

"ಆ ಬಂದೂಕಧಾರಿ ಗುಂಪು ಕೇರಿಯತ್ತ ಬರ್ತಾ ಇತ್ತು. ನಾನು ಬಾಗ್ಲು ಮುಚ್ದೆ. ತಾತ ತಿತಾಯ್ ರಾಮ್‌ನನ್ನು ಮರೆಯಲ್ಲಿ ಅಡಗಿಕೊಳ್ಳುವಂತೆ ಮಾಡಿದೆ. ಬಂದವರು ಗಂಡಸರನ್ನು ಹುಡುಕಿ ಸಿಗದೆ ವಾಪಸ್ಸು ಹೋಗ್ತಾರೆ ಅಂದುಕೊಂಡಿದ್ದೆ. ಆದರೆ ಮನೆಗೆ ನುಗ್ಗಿದ ಅವರು ನನ್ನ ಅಮ್ಮ, ಅಜ್ಜಿಯರನ್ನು ಹಿಡಿದು ಥಳಿಸತೊಡಗಿದರು. ಅಜ್ಜಿ ನೋವು ತಡೀಲಾರ್ದೆ ಚೀರಿದಳು. ಬಚ್ಚಿಟ್ಟುಕೊಂಡಿದ್ದ ತಾತ ಹೊರ ಬಂದು 'ಹೆಂಗಸರನ್ನು ಬಿಟ್ಟು ಬಿಡಿ, ಬೇಕಾದರೆ ನನ್ನನ್ನು ಥಳಿಸಿ' ಅಂದದ್ದೇ ತಡ, ಆ ಗುಂಪು ತಾತನ ಮೇಲೆ ಎರಗಿತು. ಆಮೇಲೆ ಅಜ್ಜ, ಅಜ್ಜಿ, ಅಮ್ಮನ ರಣಾ ರಕ್ತವಾಗಿದ್ದ ದೇಹಗಳು ನೆಲಕ್ಕುರುಳಿದವು. ತಾತ, 'ನೀರು ನೀರು' ಎಂದು ಅರಚುತ್ತಿದ್ದ. ಅಮ್ಮ ತೆವಳುತ್ತಾ ಹೋಗಿ ನೀರು ತಂದು ಕುಡಿಸಿದಳು.

ಆ ಗುಂಪು ಯಾತಕ್ಕೋ ಕ್ಷಣ ಹೊರ ಹೋಯಿತು. ನಾನು ಹುಲ್ಲಿನ ಹೊರೆಯ ಮರೆಯಲ್ಲಿ ಅವಿತುಕೊಂಡೆ. ಅವರು ತಿರುಗಿ ಬಂದರು. ಗುಂಡು ಹಾರಿಸಿದರು. ನನ್ನ ಅಮ್ಮ, ಅಜ್ಜಿ, ಮತ್ತು ಅಜ್ಜ ಹೆಣವಾಗಿ ಉರುಳಿದರು. ಆ ನಂತರ ಅವರು ಹೆಣಗಳನ್ನು ಎಳೆದೊಯ್ಯುತ್ತಿರುವುದನ್ನು ನೋಡಿದೆ".

ಇದು ಪ್ರಮೀಳಾ ಎಂಬ 17 ವರ್ಷದ ಹುಡುಗಿ ಕಣ್ಣಾರೆ ಕಂಡದ್ದು. ಆ ಕೊಲೆಗಡುಕರು 8-10 ವರ್ಷದ ಇಬ್ಬರು ಬಾಲಕರಿಂದ ಹಿಡಿದು 70 ವರ್ಷದ ಮುದುಕರನ್ನೂ ಬಿಡದೆ ಗುಂಡಿಟ್ಟು ಕೊಂದರು.

ಆ ನಂತರ ಈ ನರಹತ್ಯೆಯಲ್ಲಿ ಅಳಿದುಳಿದವರಿಗೆ ತಿಳಿದು ಬಂದದ್ದು ಇಷ್ಟು. ಪಕ್ಕದ ಇಮಾಮ್‌ಗಂಜ್‌ನಲ್ಲಿ ವಿಜಯ ಸಿಂಗ್ ಎಂಬ ಭೂಮಾಲಿಕ ಕೊಲೆಯಾಗಿದ್ದ. ಆ ಕೊಲೆಗೆ ಪ್ರತೀಕಾರವೇ ಈ ಘೋರ ನರಹತ್ಯೆ ಎಂದು.

ಈ ದುರಂತಕ್ಕೆ ಕೇವಲ ಒಂದೇ ಒಂದು ಗಂಟೆಯ ಹಿಂದೆ ಬಲಿಷ್ಠ ಭೂಮಾಲಿಕ ಭೂಮಿಹಾರ ವಿಜಯಸಿಂಗ್‌ನ ಕೊಲೆಯಾಗಿತ್ತು. ಈತ ಬಲಿಷ್ಠ ರಾಜಕಾರಣಿಗಳ ಬೆಂಬಲವಿದ್ದಂತಹ ವ್ಯಕ್ತಿ.ಜತೆಗೆ ಭೂಮಾಲಿಕ ಬಳಗದ ನಡುವಿನ ಅತ್ಯಂತ ಪ್ರಭಾವಿ ಮುಂದಾಳು ಕೂಡ.

ಈತನ ಕೊಲೆಯ ಸುದ್ದಿ 'ಕನ್ಸಾರಾ'ದ ಭೂಮಿಹಾರರ ಕಿವಿಗೆ ಬಿತ್ತು. ಅಂದು 'ಕನ್ಸಾರಾ'ದಲ್ಲಿ ಶ್ರಾದ್ಧವೊಂದು ನಡೆಯುತ್ತಿತ್ತು. ಅದಕ್ಕಾಗಿಯೇ ಸುತ್ತಲ ಮಜೀದ್‌ಪುರ, ನಿಸುನ್‌ಪುರ, ಪರಿಯಾರ್ರೈ ಮುಂತಾದ ಹಳ್ಳಿಗಳಿಂದ ಸುಮಾರು 200 ಮಂದಿ ಭೂಮಾಲಿಕ ಭೂಮಿಹಾರರು ಬಂದು ನೆರೆದಿದ್ದರು:

ಒಂದಕ್ಕೆ ಹತ್ತು ಪ್ರತಿಗುಂಡು!

.ಕೊಲೆಗೆ 'ಮಜ್ದೂರ್‌ಕಿಸಾನ್ ಸಂಗ್ರಾಮ್ ಸಮಿತಿ' ಕಾರಣ ಎಂದು ಭಾವಿಸಿ, ಸೇಡು ತೀರಿಸಿಕೊಳ್ಳಲು ಮುಂದಾದರು. 'ಮಜ್ದೂರ್ ಕಿಸಾನ್ ಸಂಗ್ರಾಮ ಸಮಿತಿ' ಭೂಹೀನರ ಬಲಿಷ್ಠ ಸಂಘಟನೆ. 'ಕನ್ಸಾರಾ'ದ ಭೂಹೀನ ಕಹರರು ಈ ಸಮಿತಿಯ ಬೆಂಬಲಿಗರು ಎಂಬ ಅನುಮಾನ ಈ ಮಾರಣ ಹೋಮಕ್ಕೆ ನಾಂದಿಯಾಯಿತು.

ಕಳೆದ ಏಪ್ರಿಲ್ 19ರಂದು ಇದೇ ಪ್ರದೇಶಕ್ಕೆ ಸೇರಿದ 'ಅರವಾಲ್'ನಲ್ಲಿ ಪೊಲೀಸರು ಭೂಹೀನರ ಮೇಲೆ ಗುಂಡು ಹಾರಿಸಿ, 23 ಮಂದಿಯನ್ನು ಕೊಂದಿದ್ದರು. ಆ ಹಿನ್ನೆಲೆಯಲ್ಲಿಯೇ 'ಕನ್ಸಾರಾ'ದ ಕಹರರ ಬಳಿಯೂ 'ಅಕ್ರಮ ಮಾರಕಾಸ್ತ್ರ'ಗಳಿವೆ ಎಂದು ಪೊಲೀಸರು ದಾಳಿ ನಡೆಸಿದ್ದರು. ಈ ದಾಳಿ ನಿಯೋಜಿಸಿದ್ದು ಕೊಲೆಯಾದ ಭೂಮಾಲಿಕ ವಿಜಯ್ ಸಿಂಗ್. ಕಹರರಲ್ಲಿ ಭೀತಿ ಮೂಡಿಸಿ ಅವರನ್ನು ಭೂಮಿಹಾರರ ನಿರಂತರ ಗುಲಾಮರಾಗಿರುವಂತೆ ನೋಡಿಕೊಳ್ಳುವುದೇ ಈ ದಾಳಿಯ ಉದ್ದೇಶವಾಗಿತ್ತು.

ವಿಜಯಸಿಂಗ್‌ನ ಕೊಲೆಗೆ ಏನು ಮತ್ತು ಯಾರು ಕಾರಣ ಎಂಬುದು ನಿಖರವಾಗಿ ತಿಳಿದುಬಂದಿಲ್ಲ. ಆದರೆ "ವಿಜಯ ಸಿಂಗ್ ಕಹರ್ ಹುಡುಗಿಯೊಬ್ಬಳ ಮೇಲೆ ನಡೆಸಿದ ಅತ್ಯಾಚಾರವೇ ಇದಕ್ಕೆ ಕಾರಣ ಇರಬಹುದು" ಎಂಬುದು ಪೊಲೀಸ್ ಅಧಿಕಾರಿಯೊಬ್ಬರ ಅಂದಾಜು.

"ಮುಖ್ಯಮಂತ್ರಿ ದುಬೆ ಭೂಮಿಹಾರ ಭೂಮಾಲೀಕರ ಬೆನ್ನಿಗಿದ್ದಾರೆ ಎಂಬುದನ್ನು 'ಕನ್ಸಾರಾ, ನರಹತ್ಯೆ ತೋರಿಸಿಕೊಟ್ಟಿದೆ" ಎನ್ನುತ್ತಾರೆ ಲೋಕದಳದ ಪ್ರೊ॥ ಜಬೀರ್ ಹುಸೇನ್. ಅಷ್ಟೇ ಅಲ್ಲದೆ "ಉಗ್ರಗಾಮಿಗಳು ಒಂದು ಗುಂಡು ಹೊಡೆದರೆ ನಾವು ಹತ್ತು ಪ್ರತಿ ಗುಂಡು ಹೊಡೆಯುತ್ತೇವೆ ಎಂಬ ಡಿ.ಜಿ.ಪಿ. ಶಶಿಭೂಷಣ ಸಹಾಯ್ ಅವರ ಹೇಳಿಕೆಯನ್ನು ಭೂಮಿಹಾರರು ಕೃತಿಗಿಳಿಸಿದ್ದಾರೆ" ಎಂದೂ ಜಾಬೀರ್ ಆಪಾದಿಸುತ್ತಾರೆ.

ಇಷ್ಟಾಗಿಯೂ 'ಕನ್ಸಾರಾ' ಕಗ್ಗೊಲೆಯ ಸುದ್ದಿ 6 ಕಿ. ಮೀ. ಹತ್ತಿರದ ಕರ್ಪಿ ಪೊಲೀಸು ಠಾಣೆಗೆ ತಲುಪಲು 24ಗಂಟೆಗಳು ಹಿಡಿದವು. ಜಿಲ್ಲೆಯ ಪೊಲೀಸು ಉನ್ನತಾಧಿಕಾರಿ ಸಿ. ಆರ್. ಕಸ್ವಾನ್–'ಕನ್ಸಾರಾ' ತಲುಪಲು 36 ಗಂಟೆಗಳು ಬೇಕಾದವು. 48 ಗಂಟೆಗಳ ನಂತರವೂ ರಾಜ್ಯ ಸರ್ಕಾರದ ಬಳಿ ಘಟನೆಯ ಕುರಿತು ಯಾವುದೇ ಮಾಹಿತಿ ಇರಲಿಲ್ಲ.

ಈಗ ಕನ್ಸಾರಾ ಬಿಕೋ ಎನ್ನುತ್ತಿದೆ. ಊರು ತೊರೆದು ಬಂದಿರುವ ಕಹರರು ಹತ್ತಿರದ ಅತಾಯುಲಾ ಮಾಧ್ಯಮಿಕ ಶಾಲೆಯ ಕಟ್ಟಡದ ನಿರಾಶ್ರಿತರ ಶಿಬಿರದಲ್ಲಿ ತಂಗಿದ್ದಾರೆ. 'ಕನ್ಸಾರಾ'ದ ಬಗ್ಗೆ ಆಡಳಿತ ಯಂತ್ರ ತನ್ನದೇ ಆದ ದಿವ್ಯ ನಿರ್ಲಕ್ಷ್ಯ ತಾಳಿದೆ. ಪೊಲೀಸರ ಪ್ರಥಮ ವರದಿಯಲ್ಲಿ ಹೆಸರಿಸಲಾದ 13 ಜನ ಭೂಮಿಹಾರ ಭೂಮಾಲಿಕರು ರಾಜಧಾನಿ ಪಾಟ್ನಾದ ತಮ್ಮ ಬೆಂಬಲಿಗ ರಾಜಕಾರಣಿಗಳ ನಿವಾಸದಲ್ಲಿ ಆರಾಮವಾಗಿ ತಂಗಿದ್ದಾರೆ.

ಈ ಎಲ್ಲ ದಾರುಣತೆಯನ್ನೂ ಮೀರಿದ ಘಟನೆಯೊಂದು 'ಕನ್ಸಾರಾ'ದಲ್ಲಿ ನಡೆಯಿತು. ಕೊಲೆಗಡುಕರು ಕೆರೆಯಲ್ಲಿ ಎಸೆದು ಹೋದ ಹೆಣಗಳಿಗಾಗಿ ಹುಡುಕಾಟ ನಡೆಯಿತು. ರಾಜಾಮಣಿದೇವಿ ಮತ್ತು ರಮಾಮಣಿದೇವಿ ಅವರ ಇಬ್ಬರು ಮಕ್ಕಳ ಹೆಣಗಳೇ ದೊರೆಯಲಿಲ್ಲ.

ಬಿಹಾರ ದಲಿತರ ಕಗ್ಗೊ

ಗುಡಿಸಲ ಕೇರಿಗಳಿಗೆ ಹಗಲಿನ್ನ

ಸೇನಾಪಡೆಗಳು ನುಗ್ಗಿ ಗುಂಡಿ

ಭೂಮಾಲಿಕರಿಗೆ ಬೆಂಗಾ

ದಲಿತರನ್ನು ಬಂದೂಕು ಬಂ

ಇದು ಬಿಹಾರದ ಅಂತರಂಗದ

ಏಪ್ರಿಲ್ 19 ರಂದು ಇದೇ ಭಾಗಕ್ಕೆ ಸೇರಿದ ಅರವಾಲ್ ನಲ್ಲಿ ಹಾಡು ಹಗಲೇ ಜಲಿಯನ್ ವಾಲಾಬಾಗ್ ಹತ್ಯಾಕಾಂಡವೊಂದು ನಡೆಯಿತು. ಸುಮಾರು ವರ್ಷಗಳಿಂದ ಗುಡಿಸಲು ಹಾಕಿ ಬದುಕುತ್ತಿದ್ದ ಗರೀಬರ ನೆಲವನ್ನು ಸರ್ಕಾರ ಶ್ರೀಮಂತನೊಬ್ಬನಿಗೆ ಮಂಜೂರು ಮಾಡಿತ್ತು. ಇದನ್ನು ಪ್ರತಿಭಟಿಸಿ ಅಂದು ಆ ನೆಲದಲ್ಲಿ ಕಟ್ಟುತ್ತಿದ್ದ ಗೋಡೆಯನ್ನು ಕೆಡವಿ ಹಾಕಲು 'ಮಜ್ದೂರ್ ಕಿಸಾನ್ ಸಂಗ್ರಾಮ ಸಮಿತಿ'ಯ ನೇತೃತ್ವದಡಿ ಭೂಹೀನರೆಲ್ಲಾ ಸಭೆ ಸೇರಿದ್ದರು. ಪೊಲೀಸರು ನಿಷೇಧಾಜ್ಞೆ ಜಾರಿ ಮಾಡಿದ್ದರು.

ಒಂದೇ ಒಂದು ಪ್ರವೇಶದ್ವಾರವಿದ್ದ ಆ ಸ್ಥಳಕ್ಕೆ ಪೊಲೀಸರು ಧಾವಿಸಿದರು. ಪ್ರವೇಶದ್ವಾರವನ್ನು ಅಡ್ಡಗಟ್ಟಿ ನಿರಾಯುಧರಾಗಿದ್ದ ಜನರ ಮೇಲೆ ಗುಂಡಿನ ದಾಳಿ

...ಲೆಯ ಮನೆಯಲ್ಲಿ........

ನಡೆಸಿದರು. ಗೋಲಿಬಾರ್ ಆಜ್ಞೆಗೆ ನ್ಯಾಯಾಧೀಶರ, ತಾಲ್ಲೂಕು ಮ್ಯಾಜಿಸ್ಟ್ರೇಟರ ಅನುಮತಿಯೇ ಇರಲಿಲ್ಲ ಮೊಳಕಾಲಿಗಿಂತ ಕೆಳಗೆ ಗುಂಡು ಹಾರಿಸ ಬೇಕೆಂಬ ನಿಯಮವಿದ್ದರೂ ಪೊಲೀಸರು ಎದೆ, ಗುಂಡಿಗೆ ಭಾಗಗಳಿಗೆಲ್ಲಾ ಗುಂಡು ಹೊಡೆದರು. ಗುಂಡು ಹಾರಿಸುವ ಮುನ್ನ ಅಲ್ಲಿಂದ ಚದುರಿ ಹೋಗುವಂತೆ ನೆರೆದವರಿಗೆ ಕೂಗಿಹೇಳಬೇಕಿತ್ತು. ಆದರೆ ಪೊಲೀಸರು ಯಾವುದೇ ಸೂಚನೆಯನ್ನೂ ಕೊಡಲಿಲ್ಲ. ಪ್ರವೇಶದ್ವಾರವನ್ನು ಅಡ್ಡಗಟ್ಟಿ ಮನಸೋ ಇಚ್ಛೆ ಗುಂಡಿನ ಮಳೆಗೆರೆದರು. ನಡು ಹಗಲಿನಲ್ಲೇ ಅಂಧಕಾರ ಕವಿಯಿತು. 23 ಜನ ಭೂಹೀನರ ಹೆಣಗಳು ಉರುಳಿದವು.

ಈ ಗೋಲಿಬಾರ್‌ನ್ನು ಡಿ. ಜೆ. ಪಿ. ಶಶಿಭೂಷಣ ಸಹಾಯ್ ಯಾವುದೇ ನಾಚಿಕೆಯೂ ಇಲ್ಲದೆ ಸಮರ್ಥಿಸಿಕೊಂಡರು. ಅರವಾಲ್‌ಗೆ ಭೇಟಿ ಕೊಡಲು ಬಯಸಿದ ರಾಷ್ಟ್ರಪತಿ ಜೇಲ್‌ಸಿಂಹರನ್ನು ಭೂವಿಹಾರರ ಬೆಂಗಾವಲಿಗೆ ನಿಂತಿರುವ ಕಾಂಗ್ರೆ ಮುಖ್ಯಮಂತ್ರಿ ಬಿಂದೇಶ್ವರ ದುಬೆ ತಡೆದರು. ಇದಕ್ಕೆ ಅವರು ಕೊಟ್ಟ ಕಾರಣ ಅರವಾಲ್‌ಗೆ ರಸ್ತೆಯೇ ಇಲ್ಲ, ಎಂಬುದು.

ದೇಶದಾದ್ಯಂತ ಭೀತಿಯ ಅಲೆ ಎಬ್ಬಿಸಿದ ಈ ದುರ್ಘಟನೆಯ ಬಗ್ಗೆ ಪ್ರಧಾನಿ ರಾಜೀವ್‌ಗಾಂಧಿ ಇನ್ನೂ ಪ್ರತಿಕ್ರಿಯೆಯನ್ನೇ ವ್ಯಕ್ತಪಡಿಸಿಲ್ಲ. ಅರವಾಲ್‌ನಲ್ಲಿ ಅಸಹಾಯಕ ಭೂಹೀನರ ಹೆಣಗಳು ಉರುಳುತ್ತಿರುವಾಗ ರಾಜೀವ್ ಲಿಬ್ಯಾದ ಮೇಲೆ ನಡೆದ ಅಮೆರಿಕದ ದಾಳಿ ಖಂಡಿಸಲು ಬಿ. ಆರ್. ಭಗತ್ ಅವರನ್ನು

...ಮನೆಯಾಗಿದೆ. ಭೂಹೀನ ದಲಿತರ ...ರುಳಿನ್ನದೆ ಭೂಮಾಲಿಕರ ಖಾಸಗಿ ಸಶಸ್ತ್ರ ...ಗರೆಯುತ್ತಿವೆ.

ಪೊಲೀಸರು ಧಕಾಯಿತರೂ ಕೂಡ ...ಗಳ ಭೀತಿಯ ನೆರಳಡಿ ಗೆದೂಡಿದ್ದಾರೆ. ...ನ ಮುಖಿಯ ಒಂದು ತುಣುಕು.

ಕಳುಹಿಸಿ ಕೊಟ್ಟಿದ್ದರು. ಲಿಬ್ಯಾದ ಮೇಲಿನ ದಾಳಿಯನ್ನು, 'ಮಾನವ ಹಕ್ಕುಗಳ ಮೇಲೆ ನಡೆದ ಘೋರ ಆಘಾತ' ಎಂಬ ದೊಡ್ಡ ದೊಡ್ಡ ಮಾತುಗಳಲ್ಲಿ ರಾಜೀವ್ ಜಗತ್ತಿಗೇನೆ ಕೂಗಿ ಸಾರುತ್ತಿದ್ದರು.

ಸ್ವತಂತ್ರ್ಯ ಭಾರತದಲ್ಲಿ ನಡೆದ ಅತ್ಯಂತ ಘೋರ ನರಹತ್ಯೆ ಇದು. ಈ ಕುರಿತು ಸರ್ಕಾರ ಯಾವುದೇ ಕಳವಳವನ್ನೂ ವ್ಯಕ್ತಪಡಿಸದೆ ಹೋದದ್ದೂ ಒಂದು ಐತಿಹಾಸಿಕ ಕಳಂಕ.

ಬಿಹಾರ ದಲಿತರ ಕಗ್ಗೊಲೆಯ ಮನೆಯಾಗಿದೆ. ಪಿಪ್ರಾ, ಫರಸಬಿಘಾ, ಗುಹಾ, ಬಂಜಿ, ನಿನ್ನೆ ಅರವಾಲ್, ಇಂದು ಕನ್ಸಾರಾ... ಹೀಗೆ ಮಾರಣ ಹೋಮಗಳ ಸರಮಾಲೆಯೇ ಮುಂದುವರೆದಿದೆ. ಅಧಿಕಾರಕ್ಕೆ ಜನತಾ, ಕಾಂಗ್ರೆ, ಯಾವುದೇ ಪಕ್ಷ ಬಂದರೂ ದಲಿತರ ದಮನ ಮಾತ್ರ ನಿಲ್ಲುವುದೇ ಇಲ್ಲ.

ಏಪ್ರಿಲ್ ಮೊದಲವಾರದಲ್ಲಿ ಅಮಿನಾಬಾದ್‌ನಿಂದ ನಾಲ್ವರು ಬೀಡಿ ಕಾರ್ಮಿಕರನ್ನು ಅಪಹರಿಸಲಾಗಿತ್ತು. ಅಪಹರಿಸಿದ್ದು ಬಂಗಾಳಿಸಿಂಗ್ ಎಂಬ ಕುಪ್ರಸಿದ್ಧ ಢಕಾಯಿತನ ನೇತೃತ್ವದ ಭೂಮಾಲಿಕರ ತಂಡ. ಬಂಗಾಳಿ ಸಿಂಗ್ ಕೇವಲ ಢಕಾಯಿತ ಮಾತ್ರವಲ್ಲ ಭೂಮಾಲಿಕರ ಸಶಸ್ತ್ರ ಸೇನಾಪಡೆಯಾದ 'ಬ್ರಹರ್ಷಿ ಸೇನಾ'ದ ನಾಯಕ ಕೂಡ.

ಏಪ್ರಿಲ್ 12ರ ರಾತ್ರಿ 'ಮಜ್ದೂರ್ ಕಿಸಾನ್‌ಸಭಾ' ಒಂದು ಸಾರ್ವಜನಿಕ ಸಭೆ ನಡೆಸುತ್ತಿತ್ತು. ಆಗ ಅಲ್ಲಿದ್ದವರಿಗೆ ಪಕ್ಕದ ಹೊಲಗಳಲ್ಲಿ ಗುಂಡು ಹಾರಿಸಿದ ಶಬ್ದ ಕೇಳಿಸಿತು. ಮಾರನೆಯದಿನ ಆ ಕೆಲಸಗಾರರು ಅನಾಥ ಹೆಣಗಳಾಗಿ ಬಿದ್ದಿದ್ದರು.

ಬಿಹಾರದ ಗ್ರಾಮೀಣ ಪ್ರದೇಶಗಳ ಸಾಮಾಜಿಕ ಪರಿಸ್ಥಿತಿ ತೀವ್ರ ಹದಗೆಟ್ಟಿದೆ. ಅಲ್ಲಿ ಯಾವುದೇ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಕುರುಹುಗಳಾಗಲಿ, ನ್ಯಾಯ ನೀತಿಯ ಸುಳಿವಾಗಲಿ ಇಲ್ಲ. ಅಲ್ಲಿ ರಾಜ್ಯವಾಳುತ್ತಿರುವುದು ಬಂದೂಕು, ಬಯೋನೆಟ್ಟುಗಳು ಮಾತ್ರ ಅಲ್ಲಿರುವುದು ತೋಳುಬಲ ಇದ್ದವ ಬದುಕಲು ಸಾಧ್ಯವಾಗುವ ಅರಣ್ಯನ್ಯಾಯ ಮಾತ್ರ.

ಕೊಲೆಗಡುಕ ಖಾಸಗಿ ಸೇನೆಗಳು

ಇತ್ತೀಚಿನ ಮೂರು ನರಹತ್ಯೆಗಳ ಹಿಂದೆ ಭೂಮಾಲಿಕರು ಜಾತಿ ಆಧಾರದ ಮೇಲೆ ಸಂಘಟಿಸಿರುವ ಅವರ ಖಾಸಗಿ ಸಶಸ್ತ್ರ ಸೇನಾ ಪಡೆಗಳು ಮತ್ತು ಇವರಿಗೆ ಬೆಂಗಾವಲಾಗಿ ನಿಂತಿರುವ ಢಕಾಯಿತರು. ಹಾಗೂ ಪೊಲೀಸರು ಇದ್ದದ್ದು ಬಹಿರಂಗಗೊಂಡಿದೆ. ಇವರೆಲ್ಲಾ ಸೇರಿ ತಮ್ಮ ಹಕ್ಕುಗಳಿಗಾಗಿ ಹೋರಾಡುವ ಬಿಹಾರದ ಗ್ರಾಮೀಣ ಪ್ರದೇಶಗಳ ಭೂ ಹೀನರ ಮೇಲೆ ನಿರಂತರವಾದ ಹಿಂಸೆ, ದೌರ್ಜನ್ಯ, ದಮನವನ್ನು ಮುಂದುವರೆಸಿದ್ದಾರೆ.

ಅದು ನಕ್ಸಲೀಯರೇ ಆಗಿರಲಿ, ಕಮ್ಯುನಿಸ್ಟ್ ಪಕ್ಷವೇ ಆಗಿರಲಿ, ಇಲ್ಲ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವೇ ಆಗಿರಲಿ, ಅಷ್ಟೇಕೆ ಜಯಪ್ರಕಾಶ ನಾರಾಯಣರ ಯುವ ಸಂಘರ್ಷವಾಹಿನಿಯೇ ಆಗಿರಲಿ... ಇವರೆಲ್ಲರ ಮೇಲೆಯೂ ಬಲಿಷ್ಠ ಭೂಮಾಲಿಕ ಮೈತ್ರಿಕೂಟ ಹಿಂಸೆಯನ್ನು ಪ್ರಯೋಗಿಸುತ್ತಿದೆ. ಇದು 1980ರ ನಂತರದ ಕ್ಷಿಪ್ರ ಬೆಳವಣಿಗೆ.

1980ರ ಜನವರಿಯಿಂದ 1983ರ ಜುಲೈವರೆಗೆ ಭೂಮಾಲಿಕರು ಮತ್ತು ಪೊಲೀಸರಿಂದ ಸುಮಾರು 185 ಜನ ಕೊಲೆಗೀಡಾಗಿದ್ದಾರೆ. 1983ರ ಜುಲೈಯಿಂದ 1984ರ ಡಿಸೆಂಬರ್ ವರೆಗೆ ಸತ್ತವರ ಬಗ್ಗೆ ಮಾಹಿತಿ ಅಪೂರ್ಣ. ಆದರೆ ಸುಮಾರು 26 ಜನ ಸತ್ತಿರಬಹುದೆಂದು ಅಂದಾಜು.

1985 ರ ಜನವರಿಯಿಂದ 1986 ಏಪ್ರಿಲ್‌ವರೆಗೆ ಸುಮಾರು 144 ಜನ ಕೊಲೆಯಾಗಿದ್ದಾರೆ. ಇವರಲ್ಲಿ 83 ಜನ ಪೊಲೀಸರಿಂದ 67 ಜನ ಭೂಮಾಲಿಕರಿಂದ, ಇನ್ನುಳಿದ 8 ಜನ ಪೊಲೀಸು ಮತ್ತು ಭೂಮಾಲಿಕರ ಜಂಟಿ ಕಾರ್ಯಾಚರಣೆಯಿಂದ ಕೊಲೆಗೀಡಾಗಿದ್ದಾರೆ.

ಇದು ಇತ್ತೀಚೆಗೆ ಮಾನವ ಹಕ್ಕುಗಳ ಸಮಿತಿಯಾದ ಪಿ.ಯು.ಡಿ.ಆರ್. ನಡೆಸಿದ ತನಿಖಾ ವರದಿಯಿಂದ ತಿಳಿದು ಬಂದಿರುವ ಅಂಕಿ ಅಂಶ.

ಈ ಎಲ್ಲ ಕೊಲೆಗಳನ್ನೂ ಸರ್ಕಾರ 'ನಕ್ಸಲೀಯರ ದಮನ'ದ ಹೆಸರಿನಲ್ಲಿ 'ಕಾನೂನು ಮತ್ತು ಶಾಂತಿ ಪಾಲನೆ'ಯ ಹೆಸರಿನಲ್ಲಿ ಅಥವಾ ಆತ್ಮರಕ್ಷಣೆಯ ಹೆಸರಿನಲ್ಲಿ ಸಮರ್ಥಿಸಿಕೊಂಡಿದೆ.

85-86ರಲ್ಲಿ ಕೊಲೆಯಾದ 144 ಜನರ ಪೈಕಿ 64 ಜನ ಮಾತ್ರ ಪೊಲೀಸರು ಹೇಳುವ ನಕ್ಸಲೀಯ ಚೌಕಟ್ಟಿಗೆ ಹೊಂದುತ್ತಾರೆ. ಇವರಲ್ಲಿ 10 ಜನ ಸಿ.ಪಿ.ಐ. 5 ಜನ ಸಿ.ಪಿ.ಎಂ., 15 ಜನ ಸ್ವಯಂಸೇವಾ ಸಂಸ್ಥೆಗೆ ಸೇರಿದ್ದಾರೆ. ಇನ್ನುಳಿದವರಲ್ಲಿ 15 ಜನ ಅಸಂಘಟಿತರು ಹಾಗೂ35ಜನ ಅಪರಿಚಿತರು. ಸಿ.ಪಿ.ಎಂ.ಪಕ್ಷದ ರಾಜ್ಯ ಸಮಿತಿಯ ಪ್ರಕಾರ 1980-83ರಲ್ಲಿ 100ಜನ,84-86 ರಲ್ಲಿ (ಇದುವರೆಗೆ) 45 ಜನ ಕಾರ್ಯಕರ್ತರೂ, ಬೆಂಬಲಿಗರೂ ಕೊಲೆಯಾಗಿದ್ದಾರೆ.

ಬಿಹಾರದ ಇಂಥ ಸಾಮಾಜಿಕ ವೈಷಮ್ಯಕ್ಕೆ ಕಾರಣ, ಇತ್ತೀಚಿನ ಐದು ವರ್ಷಗಳಲ್ಲಿ ಗಟ್ಟಿಗೊಳ್ಳುತ್ತಿರುವ ಭೂಹೀನರ ಚಳವಳಿಗಳು. ಬಿಹಾರದ ಕುದಿವ ಜ್ವಾಲಾಮುಖಿಯ ಭಾಗ ಎನ್ನಲಾದ ಪಾಟ್ನಾ, ಗಯಾ ಜಿಲ್ಲೆಗಳಲ್ಲಿ ಈ ಭೂಹೀನರನ್ನು ಸಂಘಟಿಸಿ ಹೋರಾಟಕ್ಕೆ ಇಳಿಸುತ್ತಿರುವ ಪ್ರಬಲ ಸಂಘಟನೆಗಳು 'ಮಜ್ದೂರ್ ಕಿಸಾನ್ ಸಂಗ್ರಾಮ್ ಸಮಿತಿ, ಹಾಗೂ 'ಬಿಹಾರ್ ಪ್ರದೇಶ್ ಕಿಸಾನ್ ಸಭಾ. ಈ ಚಳವಳಿ ಭೂಮಾಲಿಕರು ರಾಜಕಾರಣಿಗಳು, ಪಟ್ಟಭದ್ರ ಹಿತಾಸಕ್ತಿಗಳಲ್ಲಿ ತೀವ್ರ ಆತಂತ ಹುಟ್ಟಿಸಿದೆ. ಪರಿಣಾಮವಾಗಿ ಎಲ್ಲ ಶಕ್ತಿಗಳೂ ಒಂದಾಗಿ ಭೂಹೀನರ ದಮನಕ್ಕೆ ಮುಂದಾಗಿವೆ.

ಬಿಹಾರದಲ್ಲೀಗ ನಾಲ್ಕು ಬಲಿಷ್ಠ ಭೂಮಾಲಿಕರ ಖಾಸಗಿ ಸೇನೆಗಳು ಕಾರ್ಯಾಚರಣೆ ನಡೆಸುತ್ತಿವೆ. ಕುರ್ಮಿ ಭೂಮಾಲಿಕರ 'ಭೂಮಿ ಸೇನಾ' ಭೂಮಿಹಾರರ 'ಬ್ರಹ್ಮರ್ಷಿ ಸೇನಾ, ರಜಪೂತರ 'ಕುಂಯಿರ್ ಸಿಂಗ್' ಸೇನಾ, ಯಾದವರ 'ಲೊರಿಕ್ ಸೇನಾ' ಇವೇ ಆ ಸೇನೆಗಳು.

ಸರ್ಕಾರ ಭೂಮಾಲಿಕರ ಬೆನ್ನಿಗೆ

ಸರ್ಕಾರ ಪ್ರತ್ಯಕ್ಷ ಯಾ ಪರೋಕ್ಷವಾಗಿ ಇಂಥ ಸೇನೆಗಳಿಗೆ ಬೆಂಬಲ ನೀಡುತ್ತಿದೆ. ಪೊಲೀಸರು, ಭೂಮಾಲಿಕರು ಕೂಡಿ ಸಮಾಲೋಚಿಸಿಯೇ ಕೆಲವು ಕಡೆ ಇಂಥ ಸೇನೆಗಳನ್ನು ಸಜ್ಜುಗೊಳಿಸುತ್ತಿದ್ದಾರೆ. ಇವರ ಜತೆಗೆ ಢಕಾಯಿತರೂ ಕೂಡಿಕೊಂಡು ಭೂಹೀನರ ಚಳವಳಿಗಳನ್ನು ಹತ್ತಿಕ್ಕುತ್ತಿದ್ದಾರೆ. ಪೊಲೀಸರು ಭೂಹೀನರನ್ನು ಢಕಾಯಿತರ, ಉಗ್ರಗಾಮಿಗಳೆನೆವದಲ್ಲಿ ಸುಲಭವಾಗಿ ಗುಂಡಿಕ್ಕಿ ಕೊಲ್ಲತೊಡಗಿದ್ದಾರೆ.

ಅರವಾಲ್ ಪೊಲೀಸು ಗೋಳಿಬಾರ್‌ಗಿಂತ ಹಿಂದೆ ಸುಮಾರು 46 ಗೋಳಿಬಾರ್‌ಗಳು ನಡೆದಿವೆ. ಆದರೆ ಸರ್ಕಾರ ಒಂದೇ ಒಂದು ಘಟನೆಯ ಬಗ್ಗೆ ಮಾತ್ರ ತನಿಖೆಗೆ ಆಜ್ಞೆ ಮಾಡಿದೆ. ಈ ಬಂಜಿ ನರಹತ್ಯೆಗೆ ಸಂಬಂಧಿಸಿ ತನಿಖೆ ಮಾಡಲು ಆಜ್ಞೆಯಾಗಿ ವರ್ಷ ಕಳೆದಿದ್ದರೂ ಇನ್ನೂ ತನಿಖಾವರದಿ ಸರ್ಕಾರಕ್ಕೆ ಮುಟ್ಟಿಲ್ಲ.

ನ್ಯಾಯಕ್ಕಾಗಿ ಧ್ವನಿ ಎತ್ತಿದವರು ಸರಳುಗಳ ಹಿಂದೆ ಬಂಧಿಯಾಗುತ್ತಿದ್ದರೆ, ಇತ್ತ ಇದೆಲ್ಲಕ್ಕೂ ಕಾರಣರಾದ ಭೂಮಾಲಿಕರು, ರಾಜಕಾರಣಿಗಳು ನಿರಾತಂಕವಾಗಿ ತಮ್ಮ ದಮನದ ಕಾರ್ಯತಂತ್ರಗಳನ್ನು ರೂಪಿಸುವುದರಲ್ಲಿ ಮಗ್ನರಾಗಿದ್ದಾರೆ.

ಕಾರಂಚೇಡು ಕಗ್ಗೊಲೆಯ ನೆನಪು

1985ರ ಜುಲೈ–17. ಸೂರ್ಯ ಆಗತಾನೇ ಕಣ್ಣು ಬಿಡತೊಡಗಿದ್ದ. ಭತ್ತದ ಎಳೆ ಪೈರು ಮುಂಜಾನೆಯ ತಂಗಾಳಿಗೆ ತಲೆದೂಗತೊಡಗಿತ್ತು. ಗೂಡು ಬಿಟ್ಟ ಹಕ್ಕಿಗಳು ಹಾರಿ ಹೋಗಲು ದಿಕ್ಕು ಹುಡುಕತೊಡಗಿದ್ದವು. ಹಾಗೆಯೇ ಕಾರಂಚೇಡುವಿನ ಮಾದಿಗ ಕೇರಿಯ ಗುಡಿಸಲ ಗೂಡುಗಳಿಂದಲೂ ಸಹ. ಗಟ್ಟಿಮುಟ್ಟಾದ ಗಂಡಸರು ಹೊಲ-ಗದ್ದೆಗಳತ್ತ ದುಡಿಯಲು ಹೊರಟಿದ್ದರು. ಹೆಂಗಳೆಯರು ಒಲೆ ಗಿಟ್ಟಿ ಬೆಂಕಿಯ ಹೊಗೆ ಎದ್ದು ಗುಡಿಸಲ ಗರಿಗಳ ಹಾಯ್ದು ಚಿತ್ರ ಬಿಡಿಸತೊಡಗಿತ್ತು

ಬೆಳಿಗ್ಗೆ 7 ಗಂಟೆ. ಸವರ್ಣೀಯ[illegible]ಾರ ಕೇರಿಗೆ ದುಡಿಯಲು ಹೋದ ಮೂರು ದಲಿತರನ್ನು ಥಳಿಸಿದ ಗುಂಪು ಮಾದಿಗ ಕೇರಿಯತ್ತ ಬರತೊಡಗಿತು. ಕೊಡಲಿ. ಕತ್ತಿ, ಕಬ್ಬಿಣದ ಸರಳು, ಮಚ್ಚು ಮುಂತಾದ ಮಾರಕಾಸ್ತ್ರ ಹಿಡಿದಿದ್ದ 300-400 ಜನರ ಈ ಗುಂಪು ಮಾದಿಗ ಕೇರಿಯನ್ನು ಮುತ್ತಿತು.

ನಂತರ...ಕಾರಂಚೇಡು ಶತಮಾನಗಳ ನಂತರದ ಕುರುಕ್ಷೇತ್ರವಾಯಿತು. 'ಅಯ್ಯೋ ಎಲ್ಲಾ ನನ್ನ ಅಣ್ಣ-ತಮ್ಮಂದಿರು, ಬಂಧು-ಬಳಗ ಹೇಗೆ ಕೊಲ್ಲಲಿ? ಎಂದ ಮಾನವೀಯತೆಯ ಕೊನೆಯ ಮಾತು 'ಕರ್ಮಣ್ಯೇ ವಾಧಿಕಾರಸ್ತೆ...ನೀನು ನಿಮಿತ್ತ; ಕೊಲ್ಲುವವನೂ, ಕೊಲ್ಲಿಸುವವನೂ ನಾನೇ. ಎಲ್ಲವೂ ನನ್ನಿಂದಲೇ' ಎಂಬ ಆಜ್ಞೆಯಲ್ಲಿ ಕೊಚ್ಚಿ ಹೋಯಿತು.

ಕಾರಂಚೇಡುವಿನಲ್ಲಿ ಯಾವುದೂ ನಿಮಿತ್ತವಾಗಿರಲಿಲ್ಲ. ಬಂಧು-ಬಳಗವೂ ಆಗಿರಲಿಲ್ಲ. ಅರ್ಜುನನೇ ಕೃಷ್ಣನಲ್ಲಿ ಲೀನವಾಗಿ ಒಂದು ಸಮುದಾಯದ ಮನಸ್ಸಾಗಿತ್ತು. ನಿರಾಯುಧನಾದ ಕರ್ಣನನ್ನು, ವಾಲಿಯನ್ನು ಕೊಂದ ಮನಸ್ಸು, ಕೊಂದ ಆಯುಧಗಳು ತಮ್ಮ ನೆತ್ತರ ದಾಹ ತೀರಿಸಿಕೊಂಡವು.

ಪರಿಣಾಮ; 8 ವರ್ಷದ ಮಕ್ಕಳಿಂದ 80 ವರ್ಷದ ಮುದುಕರವರೆಗೆ ನೂರಾರು ಜನ ಹಲ್ಲೆಗೀಡಾದರು. ಎಂಟು ಜನ ಕೊಲೆಯಾದರು. ಇಬ್ಬರು ಮಹಿಳೆಯರ ಮೇಲೆ ಅತ್ಯಾಚಾರ ನಡೆಯಿತು. ಒಬ್ಬ ಗರ್ಭಿಣಿಯ ಹೊಟ್ಟೆಗೆ ಭರ್ಜಿಯಿಂದ ತಿವಿದು ಕರುಳು ಬಗೆಯಲಾಯಿತು.

ನೂರಾರು ಜನ ಭೀತಿಯಿಂದ, ಜೀವ ಭಯದಿಂದ ದಿಕ್ಕು ದಿಕ್ಕುಗಳಿಗೆ ಓಡತೊಡಗಿದರು. ಸ್ಕೂಟರ್, ಮೋಟಾರ್‌ಸೈಕಲ್‌ಗಳ ಮೂಲಕ ಬೆನ್ನಟ್ಟಿ ಬೇಟೆ ನಡೆಯಿತು.

ದಲಿತರ ಬೆವರಿನಿಂದ ತೊಯ್ಯುತ್ತಿದ್ದ ಕಾರಂಚೇಡುವಿನ ನೆಲ ರಕ್ತದಿಂದ, ತುಂಡರಿಸಿದ ದೇಹಗಳಿಂದ ತುಂಬಿ ಹೋಯಿತು. ಓಡಿ ಬಚಾವಾದ ಜನ 8 ಕಿ. ಮೀ. ದೂರದ ಚಿರಾಲ ಪಟ್ಟಣದ ಚರ್ಚ್ ಆವರಣದಲ್ಲಿ ರಕ್ಷಣೆಗಾಗಿ ಆರ್ತನಾದ ಮಾಡುತ್ತಿದ್ದರು.

ಇಷ್ಟಕ್ಕೂ ಕಾರಂಚೇಡುವಿನ ದಲಿತರು ಮಾಡಿದ ಅಪರಾಧ ಏನೆಂದರೆ...

ತಲೆ ಬಗ್ಗಿಸಿ ನಡೆಯದೇ ತಲೆ ಎತ್ತಿ [illegible].

ದಲಿತ ಯುವಕನೊಬ್ಬ ಕಮ್ಮಾ ಜಾತಿಯ ಹುಡುಗಿಯನ್ನು ಪ್ರೀತಿಸಿ ಮದುವೆಯಾದದ್ದು.

ಚುನಾವಣೆಯಲ್ಲಿ ಕಮ್ಮಾಗಳ ಭದ್ರಕೋಟೆಯಾದ 'ತೆಲುಗು ದೇಶಂ' ಪಕ್ಷಕ್ಕೆ ಮತ ನೀಡದೆ ಕಾಂಗ್ರೆಸ್‌ಗೆ ಮತ ನೀಡಿದ್ದು.

ಎಲ್ಲಕ್ಕೂ ಮೀರಿ ಹೊರಜಗತ್ತಿನ ವಿದ್ಯಮಾನಗಳಿಗೆ ಕಣ್ಣು ಬಿಡತೊಡಗಿದ್ದು.

ಈ ಹೊಸ ಅರಿವಿನ, ಹೊಸ ಸಂವೇದನೆಯ ಫಲವೇ ಜುಲೈ 17ರ ಈ ಹತ್ಯಾಕಾಂಡ.

ಇತ್ತ ಸ್ವಾತಂತ್ರ್ಯನಂತರ ದಲಿತರ ಬೆವರಿನಿಂದ ನಳನಳಿಸಿದ ಭತ್ತ ಮತ್ತು ಹೊಗೆಸೊಪ್ಪು ಚಿನ್ನದ ಗಟ್ಟಿಗಳಾಗಿ...ಸೆಲ್ಯೂಲಾಯಿಡ್ ಜಗತ್ತಿನ ಹೊಳೆವ

ಒಂದು ವರ್ಷದ ಹಿಂದೆ........ಇದೇ ತಿಂಗಳಲ್ಲಿ ಪಕ್ಕದ ಆಂಧ್ರಪ್ರದೇಶದ ಕಾರಂಚೇಡುವಿನಲ್ಲಿ ಎಂಟು ಜನ ದಲಿತರು ಕಗ್ಗೊಲೆಯಾದರು.

ದಲಿತರ ಈ ನೋವು, ನಿಟ್ಟುಸಿರುಗಳ ಚರಮಗೀತೆ ಅಲ್ಲೊಂದು ದಲಿತ ಚಳವಳಿ ಹುಟ್ಟುಹಾಕಿದೆ.

● ಕೆ. ರಾಮಯ್ಯ

ಬೆಳ್ಳಿ ಬೆಳದಿಂಗಳಾಗಿ...ಆಂಧ್ರದ ಸಿಂಹಾಸನ ಏರಿದ ಎನ್.ಟಿ ಆರ್.ರ ರಾಜದಂಡವಾಗಿ ಬಲಿಷ್ಠ ಕಮ್ಮಾ ಜಾತಿಯ 'ಭದ್ರಕೋಟೆಯಾಗಿ...ಆ ಕೋಟೆಯಲ್ಲಿ ವಿಜಯೋತ್ಸವ ನಡೆದಿತ್ತು. ಎನ್. ಟಿ. ಆರ್.ರ ಆಳಿಯನ ಆಡುಂಬೊಲವಾದ ಕಾರಂಚೇಡುವಿನಲ್ಲಿ ಪೊಲೀಸು ಪಡೆ ಕಮ್ಮಾ ಜಮೀನುದಾರರ ಕಾಲು ನೆಕ್ಕತೊಡಗಿತ್ತು.

ಆ ನಂತರದ್ದು ನೆತ್ತರು ಬಿಂದುಗಳಲ್ಲಿ ಅರಳಿದ ದಲಿತರ ಸ್ವಾಭಿಮಾನದ ಕತೆ. ಜಮೀನುದಾರರ ಬಂಗಾರದ ಭದ್ರಕೋಟೆಯಲ್ಲಿ ಚಿಗುರೊಡೆದ ಗರಿಕೆಯ ಕತೆ.

ಮೂರು ದಿನಗಳ ನಂತರ ಎನ್. ಟಿ. ಆರ್. ಚಿರಾಲಕ್ಕೆ ಬಂದರು. ಆಸ್ಪತ್ರೆಯಲ್ಲಿ ಗಾಯಾಳುಗಳನ್ನು ಕಂಡರು. ಹಣ್ಣು ಹಂಚಲು ಮುಂದಾದರು. "ಅಯ್ಯಾ, ತಿಂಗಳಿಗೆ ಒಂದು ರೂಪಾಯಿ ಸಂಬಳ ಪಡೆಯುವ ನಿನಗೆ ಈ ಹಣ್ಣಿಗೆ ಎಲ್ಲಿಂದ ಹಣ ಬಂತು?" ಹೆಣ್ಣೊಬ್ಬಳ ಅಂತರಂಗ ಮಾತಾಡಿತು. "ನಿನ್ನ ರಕ್ತ ಸಂಬಂಧಿಗಳು ನಮ್ಮ ರಕ್ತ ಹರಿಸಿದ್ದಾರೆ ಅವರನ್ನು ದಂಡಿಸದೆ ಇಲ್ಲಿ ಯಾಕೆ ಬಂದೆ?" ನೊಂದವರ ನುಡಿ ಕೇಳಿತು.

ಸ್ಥಳೀಯ ಕಾಂಗ್ರೆಸ್ ಘಟಕ ಸೀರೆ, ಪಂಚೆ ಹಂಚಲು ಹೋಗಿ ಛೀಮಾರಿ ಹಾಕಿಸಿಕೊಂಡಿತು. ಎನ್.ಟಿ.ಆರ್. ಸರ್ಕಾರ ಪರಿಹಾರ ನೀಡಲು ಹೋಗಿ ನಿರಾಕರಿಸಲ್ಪಟ್ಟಿತು. ದೆಹಲಿ ದೊರೆ, ರಾಜೀವನ ಪರಿಹಾರ ಹೋದ ದಾರಿಯಲ್ಲೇ ಮರಳಿ ಬಂತು.

ನಾಡಿನಾದ್ಯಂತ ದಲಿತರು, ಮಿಡಿವ ಮನಸ್ಸುಳ್ಳ ಜನ ಕೂಡಿಸಿಕೊಟ್ಟ ಜನರ ಕಾಣಿಕೆಯಿಂದ ಈಗ ಅಲ್ಲೊಂದು ಪ್ರತ್ಯೇಕ 'ವಿಜಯನಗರ' ಎದ್ದು ನಿಂತಿದೆ. ಕಾರಂಚೇಡುವಿನ ಧೂರ್ತರ ಮುಖದರ್ಶನ ಒಲ್ಲದ ದಲಿತರು ಇಲ್ಲಿ ನೆಲೆ ನಿಂತಿದ್ದಾರೆ.

ಈಗ ಕಾರಂಚೇಡು ದಕ್ಷಿಣ ಭಾರತದ ದಲಿತರಿಗೊಂದು ಪಾಠಶಾಲೆ. ಹೊಸ ಚಳವಳಿಯೊಂದರ ಉಗಮ ಸ್ಥಾನ. ಅಲ್ಲಿ ಸೂರ್ಯ, ಅಲ್ಲಿ ಬೆಳಕು.

1985ರ ಸೆಪ್ಟೆಂಬರ್–1. ಚಿರಾಲದಲ್ಲಿ ಹತ್ಯಾಕಾಂಡ ಖಂಡಿಸಲು ಒಂದು ಖಂಡನಾ ಸಭೆ ನಡೆಯಿತು. ಎರಡು ಲಕ್ಷ ಜನ ಸಮಾವೇಶಗೊಂಡಿದ್ದರು. ಕಾರಂಚೇಡು ಆಂಧ್ರದಲ್ಲೊಂದು ದಲಿತ ಚಳವಳಿಗೆ ನಾಂದಿ ಹಾಡಿದೆ. ಈ ನಾಂದಿಯಿಂದ ಅಲ್ಲೊಂದು 'ದಲಿತ ಮಹಾಸಭಾ' ರೂಪಗೊಂಡಿದೆ.

ಕರ್ನಾಟಕ, ತಮಿಳುನಾಡು, ಕೇರಳ, ಮಹಾರಾಷ್ಟ್ರದ ದಲಿತ ಚಳವಳಿಗಳೊಂದಿಗೆ ಕರುಳ ಬಳ್ಳಿ ಸಂಬಂಧ ಹೊಸೆಯತೊಡಗಿದೆ.

ಇದುವರೆಗೂ ಭಾರತಾಂಬೆಯ ಹೃದಯ ಭಾಗದ ಬಿಹಾರ, ರಾಜಸ್ಥಾನ ಉತ್ತರ ಪ್ರದೇಶದ ದಲಿತರ ಗುಂಡಿಗೆಗಳನ್ನು ಬಂದೂಕು ಬೇಟೆಯಾಡುತ್ತಿತ್ತು. ಇದೀಗ ಕಾರಂಚೇಡುವಿನಲ್ಲಿ ಆಕೆಯ ಕಾಲುಗಳಾಗಿದ್ದ ದಲಿತರನ್ನು ಕಡಿಯಲಾಗಿದೆ.

ತುಂಡರಿಸಿದ ಗುಂಡಿಗೆ, ಕಡಿದ ಕಾಲುಗಳು ಕೂಡಿ ಈ ಬಂಜರಾದ ನೆಲದಲ್ಲಿ ಮಾನವೀಯತೆಯ ಪೈರು ನೆಡುವ ಕಾಯಕಕ್ಕೆ ಕೈ ಹಾಕಿವೆ.

ವಾಸ್ತವ

ನನ್ನೂರಿನಲಿ ಇರುಳೂ
ತಣ್ಣಗಾಗುವುದಿಲ್ಲ: ನಕ್ಷತ್ರ
ಮಿನುಗುವುದಿಲ್ಲ: ಚಂದ್ರ
ನಗುವುದಿಲ್ಲ.
ಬಾನು ಬಣಗುಡುತ್ತದೆ,
ಜಾತಿ ಹೂವು ಅರಳುತ್ತದೆ.
ಸೂರ್ಯನ ಕ್ರೂರ ದಯೆಯಲಿ
ಧರ್ಮ ನಗುತ್ತದೆ. ಬಣ್ಣ
ಕಳಕೊಂಡು, ದೇವರು
ಕಲ್ಲಾಗಿ, ಮಣ್ಣ ಪ್ರತಿಮೆಯಲಿ
ಬಣ್ಣದ ಪಟಗಳಲಿ ನಿರ್ಜೀವರಾಗಿದ್ದಾರೆ
ಕುಂಚದ ಹಿಡಿತವಲ್ಲೂ.

● ಪರಮಶಿವ ನಡುಬೆಟ್ಟ

ಅಂಗವಿಕಲ ಮಗುವಿಗೆ ವಿಶೇಷ ಆರೈಕೆ ಅಗತ್ಯ

ನಿಮ್ಮ ಮಗು ಅಂಗವಿಕಲವಾಗಿದ್ದರೆ ನಿರಾಶರಾಗದಿರಿ

ನಿಮ್ಮ ಮಗುವಿಗೆ ಸಾಧ್ಯವಿರುವ ಎಲ್ಲಾ ಕಾರ್ಯಗಳ ಬಗ್ಗೆ ಚಿಂತಿಸಿರಿ

ಅಂಗವಿಕಲ ಮಗು ನಿಮ್ಮ ಪ್ರೋತ್ಸಾಹದಿಂದ ಹೆಚ್ಚು ಕಡಿಮೆ ಸ್ವಾಭಾವಿಕ ಜೀವನ ನಡೆಸಲು ಮತ್ತು ಅಂಗವಿಕಲರಿಗೆ ಹೊಂದಿಕೊಳ್ಳಲು ಸಾಧ್ಯವಿದೆ.

ಮನೋದೌರ್ಬಲ್ಯದ ಮಗುವಿನೊಂದಿಗೆ ತಾಳ್ಮೆಯಿಂದ ವರ್ತಿಸಿ. ಆ ಮಗು ತನ್ನ ಮನೋವಿಕಲತೆಯ ಜೀವನಕ್ಕೆ ಹೊಂದಿಕೊಳ್ಳಲು ಸಹಕರಿಸಿ.

ನೆನಪಿಡಿ: ಅಂಗವಿಕಲತೆ ಮಗುವಿನ ತಪ್ಪಲ್ಲ. ಎಷ್ಟಾದರೂ ಅದು ನಿಮ್ಮ ಮಗು ಅಲ್ಲವೇ?

- ಪ್ರತಿಯೊಂದು ಮಗುವಿನಲ್ಲೂ ವಿಶೇಷ ಚೈತನ್ಯವಿದೆ. ಅದಕ್ಕೆ ನಿಮ್ಮ ಪ್ರೀತಿಯು ಅಗತ್ಯವಿದೆ.

ಹೆಚ್ಚಿನ ವಿವರಗಳಿಗೆ:

ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ.
ಕರ್ನಾಟಕ ಸರಕಾರ,
ಬೆಂಗಳೂರು.
ಇವರನ್ನು ಸಂಪರ್ಕಿಸಿರಿ.

ಕರ್ನಾಟಕ ವಾರ್ತೆ

ಎಂ.ಸಿ.ಲಿ.

ಅಕ್ಷರಗಳ ಬೆಳಕಿಗೆ ಹಂಬಲಿಸಿ

ದ. ಸಂ. ಸ. ಮೌನ ಮೆರವಣಿಗೆ

ಬಂಧುಗಳೇ,

38 ವರ್ಷಗಳ ಕಾಲ ಕತ್ತಲಿಂದ ಕತ್ತಲಿಗೆ ಪಯಣಿಸುತ್ತಾ ಬಂದ ದಲಿತರ ಪಾಲಿಗೆ ಈ ಸ್ವಾತಂತ್ರ್ಯ ದಿನಾಚರಣೆ ಕೂಡಾ ಕತ್ತಲು ದಿನಾಚರಣೆಯಾಗಿದೆ. ದಲಿತರ ಅಂತ್ಯವಿಲ್ಲದ ಬವಣೆಗಳ ಬದುಕಿನಲ್ಲಿ ಸ್ವಾತಂತ್ರ್ಯದ ಸೂರ್ಯ ಉದಯಿಸಿ ಬರಲಿಲ್ಲ. ಸಮತೆಯ ಹೂವ ಅರಳಿಸಲಿಲ್ಲ.

ಇತ್ತ ಸ್ವಾತಂತ್ರ್ಯದ 'ಗುತ್ತಿಗೆದಾರ'ರಾದ ಬೃಹತ್ ಬಂಡವಾಳಿಗರು, ಮೇಲ್ಜಾತಿಯ ಬಲಿಷ್ಠ ಭೂಮಾಲಿಕರು ಸ್ವಾತಂತ್ರ್ಯದ ಫಲ ಉಣ್ಣುತ್ತಿರುವಾಗ ಅತ್ತ ದಲಿತರ ಜೋಪಡಿಗಳಲ್ಲಿ ಕತ್ತಲು ಕವಿದಿದೆ. ದಾರಿದ್ರ್ಯದ ರುದ್ರನಾಟ್ಯ ಮುಂದುವರೆದಿದೆ. ಅಸ್ಪೃಶ್ಯತೆ, ಅವಮಾನಗಳ ಅಮಾನವೀಯ ಸಂಕೋಲೆಗಳು ಅವರ ಕೊರಳ ಬಿಗಿದಿವೆ. ಹಗಲೆನ್ನದೆ ಇರುಳೆನ್ನದೆ ಬೇಟೆಯಾಡುವ ಭೂಮಾಲಿಕರ ಬಂದೂಕುಗಳ ನೆರಳಡಿ ಅವರಿಂದು ಜೀವಭಯದಿಂದ ತತ್ತರಿಸುತ್ತಿದ್ದಾರೆ.

ದಲಿತರ ಈ ಕಡುದುಃಖದ, ನಿಡುಸುಯ್ಲಿನ ನಡುವೆ ಎಲ್ಲೈ ಸ್ವಾತಂತ್ರ್ಯ ಎಂಬ ಮರೀಚಿಕೆಯೇ ನಿನಗೇನು ಅರ್ಥವಿದೆ? ಯಾವ ಭರವಸೆಯ, ಯಾವ ಆನಂದದ ಮುಖವೊತ್ತು ನಿನ್ನನ್ನು ದಲಿತರು ಎದುರು ನೋಡಬೇಕು?

ದಲಿತರ ಜೋಪಡಿಗಳ ಕತ್ತಲು ಕೊಂಚವಾದರೂ ಕಮ್ಮಿಯಾಗಲು ವಿದ್ಯೆಯೊಂದೇ ಸಧ್ಯಕ್ಕೆ ಉಳಿದಿರುವ ಏಕೈಕ ದಾರಿ. ಅದಕ್ಕೆಂದೇ ದ. ಸಂ. ಸ. ಸರ್ಕಾರದ ನಕಲಿ ಕುರಿ-ಕೋಳಿ-ತುಳಿನೀತಿ ವಿರೋಧಿಸಿ, ಹೋಬಳಿಗೊಂದು ವಸತಿಶಾಲೆ ಒತ್ತಾಯಿಸಿ, 1985ರ ಏಪ್ರಿಲ್ 14ರಿಂದೀಚೆಗೆ ಮನವಿಯ ಮೇಲೆ ಮನವಿ ಸಲ್ಲಿಸುತ್ತಾ ಬಂತು. ಆಳುವವರ ಕಣ್ತೆರೆಸಲು ಇದುವರೆವಿಗೂ ಇನ್ನಿಲ್ಲದಂತೆ ಹೆಣಗಿತು. ಸರ್ಕಾರ ಕಣ್ಣು ತೆರೆಯಲೇ ಇಲ್ಲ!

ಇದೀಗ ಈ ಸ್ವಾತಂತ್ರ್ಯ ದಿನಾಚರಣೆಯ ದಿನವಾದರೂ ಸರ್ಕಾರ ಕಣ್ಣು ತೆರೆದೀತೆಂದು ಆಶಿಸಿ, ವಸತಿಶಾಲೆ ಒತ್ತಾಯಿಸಿ ಮೌನ ಮೆರವಣಿಗೆ ನಡೆಸುತ್ತಿದ್ದೇವೆ.

ಎಲ್ಲೈ ಸರ್ಕಾರವೇ ಇಂದಾದರೂ ಕಣ್ಣು ತೆರೆಯಬಲ್ಲೆಯಾ?

ಕತ್ತಲ ಕೂಪದ ಕಾಡು ಮಲ್ಲಿಗೆಗಳಿಗೆ ಅಕ್ಷರಗಳ ಬೆಳಕ ಕಾಣಿಸಬಲ್ಲೆಯಾ?

ಕರ್ನಾಟಕ ದಲಿತ ಸಂಘರ್ಷ ಸಮಿತಿ

(ಆಗಸ್ಟ್-15ರ ಕಾರ್ಯಕ್ರಮಕ್ಕಾಗಿ ಹೊರಡಿಸಿರುವ ಕರಪತ್ರ)

"ಪಿಪ್ರಾ" ಗ್ರಾಮಕ್ಕೆ ಎರಗಿದ ಹದ್ದುಗಳು

"ಪಿಪ್ರಾ"

ದಲಿತರ ಎದೆಗಳ ಆರದ ಗಾಯ. ಕಳೆದ ಎರಡು ವರ್ಷಗಳ ಹಿಂದೆ ಬಿಹಾರದ ಮುಂಘೇರ್ ಜಿಲ್ಲೆಯ ಪಿಪ್ರಾದಲ್ಲಿ 14 ಜನ ಬಡ ಯಾದವರನ್ನು ಅಲ್ಲಿನ ಬಲಿಷ್ಠ ಭೂಮಿಹಾರ್ ಜಾತಿಯ ಭೂ ಮಾಲಿಕರು ಗುಂಡಿಕ್ಕಿ ಕೊಂದಿದ್ದರು. ಸತ್ತವರಲ್ಲಿ ಒಂಭತ್ತು ಜನ ಇನ್ನೂ ಬಾಳಿ ಬದುಕಬೇಕಾಗಿದ್ದ ಎಳೆ ಹರೆಯದ ಮಕ್ಕಳು.

ನಾಡಿನಾದ್ಯಂತ 'ಪಿಪ್ರಾ' ಪ್ರತಿಭಟನೆಯ, ಜಾಗೃತಿಯ ಅಲೆ ಎಬ್ಬಿಸಿತ್ತು. ಸರ್ಕಾರ ಜನತೆಯ ಪ್ರತಿಭಟನೆಗೆ ಮಣಿದು ಕ್ರಮ ಜರುಗಿಸಿತು. ಪರಿಣಾಮ 24 ಜನ ಅಪರಾಧಿಗಳಿಗೆ ನ್ಯಾಯಾಲಯ ಶಿಕ್ಷೆ ವಿಧಿಸಿತು. ಅವರೆಲ್ಲಾ ಇಂದು ಮುಂಘೇರ್ ಜೈಲಿನಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾರೆ' ತಮ್ಮ ಅಪರಾಧಗಳನ್ನು ಮನ್ನಿಸಿ ಬಿಡುಗಡೆ ಮಾಡುವಂತೆ ಪಾಟ್ನಾ ನ್ಯಾಯಾಲಯದಲ್ಲಿ ಬಂಧಿತರು ಮನವಿ ಸಲ್ಲಿಸಿದ್ದಾರೆ.

ಇದಿಷ್ಟೂ ಪಿಪ್ರಾದ ನಂತರ ನಡೆದ ವಿದ್ಯಮಾನಗಳು. ಇದೀಗ ಪಿಪ್ರಾ ರಾಜಕೀಯ ನೇತಾರರ ಚಿನ್ನದ ಗಣಿಯಾಗತೊಡಗಿದೆ. ಅನೇಕರು ಪಿಪ್ರಾವನ್ನು ತಮ್ಮ ರಾಜಕೀಯ ಲಾಭಗಳಿಗೆ ಬಳಸಿಕೊಳ್ಳಲು ಪೈಪೋಟಿ ನಡೆಸತೊಡಗಿದ್ದಾರೆ.

ಪಿಪ್ರಾ ನರಮೇಧಕ್ಕೆ ಕಾರಣನಾದ ಠಾಕೂರ್ ಭೂಮಾಲಿಕನಿಗೆ ಕಾಂಗ್ರೆಸ್ ಪಕ್ಷ ಕಳೆದ ಲೋಕಸಭಾ ಚುನಾವಣೆಗೆ ಸೀಟು ನೀಡಿತು. ಆತ ಇಂದು ಒಬ್ಬ ಸಭ್ಯ ಲೋಕಸಭಾ ಸದಸ್ಯ!

ಈಗ ಅಪರಾಧಿಗಳೆಲ್ಲರನ್ನೂ ಬಿಡುಗಡೆ ಮಾಡುವಂತೆ ಹಿಂದುಳಿದ ವರ್ಗಗಳ ಛಾಂಪಿಯನ್ ಆದ ಲೋಕದಳದ ಕರ್ಪೂರಿ ಠಾಕೂರ್, ಮುಖ್ಯಮಂತ್ರಿ ದುಬೆ ಅವರಿಗೆ ಪತ್ರ ಬರೆದಿದ್ದಾರೆ. ಕಮ್ಯುನಿಸ್ಟ್ ಪಕ್ಷದ (ಸಿ.ಪಿ.ಐ.) ನಾಯಕ ಸುನಿಲ್ ಮುಖರ್ಜಿ ಕೂಡ ಇಂಥದ್ದೇ ಪತ್ರ ಬರೆದಿದ್ದಾರೆ.

'ಪಿಪ್ರಾ' ನರಮೇಧಕ್ಕೆ ಕಾರಣರಾದವರನ್ನು ಬಂಧಿಸಿ ಉಗ್ರಶಿಕ್ಷೆ ನೀಡ ಬೇಕೆಂದು ಅಂದು ಇವರೆಲ್ಲಾ ಒತ್ತಾಯಿಸಿದ್ದರು. ಇದ್ದಕ್ಕಿದ್ದಂತೆ ಅವರ ನಿಲುವು ಈಗ ಬದಲಾಗಿರುವುದೇಕೆ?

ಕಾರಣ ಇಷ್ಟೆ.

ಇತ್ತೀಚೆಗೆ ಸಮಾಜವಾದಿ ನಾಯಕ ಸೇವಕ್ ಯಾದವ್ ಪಿಪ್ರಾದಲ್ಲಿ ಒಂದು ಸಭೆ ಕರೆದಿದ್ದರು. ಆ ಸಭೆಯಲ್ಲಿ ಇನ್ನು ಮುಂದೆ ಜಾತಿ ಜಾತಿಗಳ ನಡುವಣ ಕ್ಷೋಭೆಯನ್ನು ನಿವಾರಿಸಲು ಪಣ ತೊಡಲಾಯಿತು.

ಆ ನಂತರ ಸುನಿಲ್ ಮುಖರ್ಜಿ ಪಿಪ್ರಾ ಗ್ರಾಮದ 400ಜನರ ಸಹಿ ಇದ್ದ ಬಂಧಿತರ ಬಿಡುಗಡೆಗೆ ಒತ್ತಾಯಿಸಿದ ಮನವಿಯನ್ನು ಮುಖ್ಯಮಂತ್ರಿ ದುಬೆಯವರಿಗೆ ಕಳುಹಿಸಿಕೊಟ್ಟರು. "ನೀವು ಖುದ್ದು ಆಸಕ್ತಿ ವಹಿಸಿ ಪಿಪ್ರಾ ಅಪರಾಧಿಗಳ ಮೇಲಿನ ಆಪಾದನೆಗಳನ್ನು ಹಿಂತೆಗೆದುಕೊಳ್ಳಿ. ಇಲ್ಲದಿದ್ದರೆ ಜಾತಿ ಪ್ರಕ್ಷೋಭೆ ಉಲ್ಬಣಗೊಳ್ಳುತ್ತೆ" ಎಂದು ಎಚ್ಚರಿಸಿದ್ದಾರೆ.

ಲೋಕದಳ ನೇತಾರ ಹಾಗೂ ಸರ್ವೋದಯ ಕಾರ್ಯಕರ್ತ ಜಬೀರ್ ಹುಸೇನ್ ಪಿಪ್ರಾ ಗ್ರಾಮಕ್ಕೆ ಸತ್ಯವನ್ನು ತಿಳಿದು ಬರಲು ತಮ್ಮ ತಂಡದ ಜತೆ ಹೋಗಿದ್ದರು. ಅಲ್ಲಿ ತಿಳಿದು ಬಂದ ಸತ್ಯವೇ ಬೇರೆ.

ಕಾನೂನಿನ ಬಲೆಯಲ್ಲಿ ಸಿಕ್ಕಿ ಬಿದ್ದ ಕೊಲೆಗಾರರನ್ನು ಬಿಡಿಸುವ ನಾಯಕರಿಗೆ ಮತ ನೀಡುವ ಭರವಸೆ ನೀಡುವಂತೆ ಭೂಮಿಹಾರ್ ಭೂ ಮಾಲಿಕರು ತಮ್ಮ ಹಿಂಬಾಲಕ ಹಿಂದುಳಿದ ವರ್ಗದವರಿಗೆ ಚುಚ್ಚಿಕೊಟ್ಟರು.

ಹೀಗಾಗಿ ಅಲ್ಲಿನ ಹಿಂದುಳಿದ ವರ್ಗದ ನಾಯಕರೆಲ್ಲಾ ಮುಖ್ಯಮಂತ್ರಿ ದುಬೆಗೆ ಅಪರಾಧಿಗಳನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸತೊಡಗಿದ್ದಾರೆ.

ಬಿಹಾರದ ಕೊಲೆಗಾರರು ಮತ್ತು ರಾಜಕಾರಣಿಗಳ ನಡುವಣ ಕಳಂಕ ಮೈತ್ರಿಗೆ ಪಿಪ್ರಾ ಒಂದು ವೇದಿಕೆಯಾಗಿದೆ. ಹಿಂದುಳಿದ ವರ್ಗಗಳ ಛಾಂಪಿಯನ್ ಎನಿಸಿಕೊಂಡಿರುವ ಕರ್ಪೂರಿ ಠಾಕೂರ್ ಮತ್ತು ಸಿ.ಪಿ.ಐ. ನಾಯಕ ಸುನಿಲ್ ಮುಖರ್ಜಿಯವರ ಪತ್ರಗಳು ಒಂದು ಅನೈತಿಕ ಒಪ್ಪಂದದ ಸಾಕ್ಷಿಗಳಾಗಿ ಇತಿಹಾಸದಲ್ಲಿ ದಾಖಲಾಗಲಿವೆ.

ಸಂಪಾದಕ/ಪ್ರಕಾಶಕ/ಮುದ್ರಕ: ರಂಗಸ್ವಾಮಿ ಬೆಲ್ಲದಮಡು, 48, 3ನೇ ಮುಖ್ಯರಸ್ತೆ 5ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-560027
ಮುದ್ರಣ: ಪೃಥ್ವಿ ಪ್ರಕಾಶನ ಲಿಮಿಟೆಡ್, ವಿಜಯನಗರ, ಬೆಂಗಳೂರು-40